ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari


Volume - 12

Issue - 9

Pages - 20

₹ - 12

October - 2014


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ಚೊಚ್ಚಲ ಯತ್ನದಲ್ಲೇ ಯಶಸ್ವಿ ಮಹಾ ಮಂಗಳಯಾನ



ಗಾಂಧಿ ಜಯಂತಿ, ದಸರಾ, ಬಕ್ರೀದ್ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 2975 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 665



**97ನೇ ಸಂವಿಧಾನ ತಿದ್ದುಪಡಿ ಆಶಯ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಗಳಿಗೆ ತಿದ್ದುಪಡಿಗಳು ಪೂರಕವಾಗಿರಬೇಕು. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳ ಮೂಲಕ ಸಹಕಾರ ಸಚಿವರ ಹಾಗೂ ಸರಕಾರದ ಗಮನಸೆಳೆಯುವ ಪ್ರಯತ್ನ ಸಹಕಾರಿಗಳದ್ದಾಗಬೇಕು.**

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ನಾಡ ಹಬ್ಬ ದಸರಾ, ಬಕ್ರೀದ್ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು ಮತ್ತು ಗಾಂಧಿ ಜಯಂತಿ ಪ್ರಯುಕ್ತ ಈ ದೇಶಕ್ಕೆ ಸ್ವಾತಂತ್ರ ತಂದುಕೊಟ್ಟ ರಾಷ್ಟ್ರಪಿತನಿಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ನಮನಗಳು.

ಸೌಹಾರ್ದ ಸಹಕಾರಿ ಕಾಯ್ದೆ 1997 ಜಾರಿಯಾದುದು 2001ರಲ್ಲಿ. ಈ ಕಾಯ್ದೆ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಅತ್ಯಂತ ವೇಗವಾಗಿದೆ. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಇತರೆ ಸಹಕಾರಿ ಸಂಸ್ಥೆಗಳಿಗೆ ಉತ್ಸಾಹವನ್ನು ತುಂಬುವ ಕಾರ್ಯವನ್ನು ಮಾಡುತ್ತಿವೆ. ಸಹಕಾರಿ ಕ್ಷೇತ್ರ ಸಾಂಪ್ರದಾಯಿಕತೆಯ ಸೊಗಡಿನಿಂದ ಹೊರಬಂದು ಆಧುನಿಕತೆಯನ್ನು ರೂಢಿಸಿಕೊಳ್ಳುವುದು ಅನಿವಾರ್ಯ ಎಂಬುದನ್ನು ಮನದಟ್ಟುಮಾಡಿವೆ. ಪೈಪೋಟಿ ಯುಗದಲ್ಲಿ ಬಾಳಿ ಬದುಕುವ ಕಲೆಗಾರಿಕೆಯನ್ನು ಕಲಿಸಿವೆ. ಸಹಕಾರಿ ಕ್ಷೇತ್ರದ ಮೂಲಕ ಏನೆಲ್ಲಾ ಸಾಧಿಸಬಹುದು ಎಂಬುದನ್ನು ತೋರಿಸಿವೆ.

ಈ ಸೌಹಾರ್ದ ಸಹಕಾರಿ ವ್ಯವಸ್ಥೆ ಇಡೀ ದೇಶದಲ್ಲಿ ಮಾದರಿ ವ್ಯವಸ್ಥೆಯಾಗಿ ಬೆಳೆದುಬಂದಿರುವುದು ಕರ್ನಾಟಕ ಸರಕಾರಕ್ಕೆ, ಸಹಕಾರ ಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿದೆ. ಆದರೆ ಸ್ನೇಹಿತರೆ ನೆಗಡಿಯಾಯಿತೆಂದು ಯಾರಾದರೂ ಮೂಗು ಕತ್ತರಿಸುತ್ತಾರಾ, ಯಾವುದೋ ಒಂದೆರಡು ಸೌಹಾರ್ದ ಸಹಕಾರಿಗಳು ಕಾನೂನಿನ ವ್ಯಾಪ್ತಿಯನ್ನು ಮೀರಿ ಕಾರ್ಯನಿರ್ವಹಿಸಿದಾಗ ಸಾರ್ವಜನಿಕರಿಗೆ ತೊಂದರೆಯಾದಾಗ ಸದರಿ ಸಹಕಾರಿಯ ಬಗ್ಗೆ ಕಾನೂನು ಕ್ರಮವಿಡಲು ಸಾಧ್ಯವಿದೆ. ಅದರ ಬದಲಿಗೆ ಕಾಯ್ದೆಯನ್ನೆ ತಿದ್ದುಪಡಿಮಾಡಿ ಸೌಹಾರ್ದ ಸಹಕಾರಿ ಆಶಯವನ್ನು ಗಾಳಿಗೆ ತೂರಿ ಸರಕಾರದ ಹತೋಟಿಗೆ ಅವಕಾಶವಾಗುವ ತಿದ್ದುಪಡಿ ಮಾಡುವುದು ಸೂಕ್ತವೆನಿಸದು.

97ನೇ ಸಂವಿಧಾನ ತಿದ್ದುಪಡಿ ಜಾರಿಮಾಡುವುದಕ್ಕೆ ಮೊದಲು ಸೌಹಾರ್ದ ಸಹಕಾರಿ ಕಾಯ್ದೆ ಹೆಚ್ಚಿನ ಸ್ವಾಯತ್ತತೆಗೆ ಅವಕಾಶವಿತ್ತು. 97ನೇ ಸಂವಿಧಾನ ತಿದ್ದುಪಡಿಯನ್ನು ಯಥಾವತ್ತಾಗಿ ಜಾರಿಗೆ ಕೊಟ್ಟಿದ್ದರೂ ಏನೂ ತೊಂದರೆ ಇರಲಿಲ್ಲ. ಆದರೆ 97ನೇ ಸಂವಿಧಾನ ತಿದ್ದುಪಡಿಯನ್ನು ಜಾರಿಗೊಳಿಸುವಾಗ ರಾಜ್ಯ ಸರಕಾರ ತನ್ನದೇ ಅದ ಕೆಲವು ವಿಷಯಗಳನ್ನು ಅಳವಡಿಸಿರುವುದು ಸರಕಾರ ಮತ್ತು ಸಹಕಾರ ಇಲಾಖೆ ಸಹಕಾರಿ ಸಂಘಗಳಿಗೆ ಅಥವಾ ಸೌಹಾರ್ದ ಸಹಕಾರಿಗಳಿಗೆ ಸಹಕಾರಿ ಕ್ಷೇತ್ರಕ್ಕೆ ಸ್ವಾಯತ್ತತೆಯನ್ನು ನೀಡಲು ಮನಸಿಲ್ಲವೆಂಬಂತೆ ಕಾರ್ಯನಿರ್ವಹಿಸುತ್ತಿರುವುದು, ಸಂವಿಧಾನ ತಿದ್ದುಪಡಿಯ ಆಶಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲ ಆಶಯಗಳಿಗೆ ಸ್ಪಂದಿಸಲಿಲ್ಲ ಎಂಬ ಭಾವನೆ ಸಹಕಾರಿಗಳಿಗೆ ಬಂದಿದೆ.

ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಸರಕಾರ ಪ್ರೋತ್ಸಾಹಿಸುವ ಬದಲಿಗೆ ಹತೋಟಿಯನ್ನು ಸಾಧಿಸುವುದರಿಂದ ಬೆಳವಣಿಗೆ ಕುಂಠಿತವಾಗುತ್ತಿದೆ ಎಂಬುದನ್ನು ಅರ್ಧನಾರೀಶ್ವರ ಮತ್ತು ಚೌಧರಿ ಬ್ರಹ್ಮಪ್ರಕಾಶ ಸಮಿತಿಯ ವರದಿಯಿಂದ ತಿಳಿದಿಲ್ಲವೇ? ಚೌಧರಿ ಬ್ರಹ್ಮಪ್ರಕಾಶ ವರದಿ ಆಧಾರದ ಮೇಲಲ್ಲವೆ ಸಹಕಾರಿ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆಯನ್ನು ಕೊಡಬೇಕು ಎಂದು ಯೋಜನಾ ಆಯೋಗದವರು ಎಲ್ಲಾ ರಾಜ್ಯಗಳಿಗೂ ಮಾದರಿ ಕಾಯ್ದೆಯನ್ನು ಕಳುಹಿಸಿದ್ದು. ಈ ಮಾದರಿ ಕಾಯ್ದೆಯನ್ನು ಎಲ್ಲಾ ರಾಜ್ಯಗಳು ಅಳವಡಿಸದ ಪರಿಣಾಮವೇ 97ನೇ ಸಂವಿಧಾನ ತಿದ್ದುಪಡಿ.

ಸರಕಾರ ಸಹಕಾರ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡುವ ನಿಟ್ಟಿನಲ್ಲಿ ಚೌಕಾಶಿ ಮಾಡಿದರೆ ಸಹಕಾರ ಕ್ಷೇತ್ರದ ಪ್ರಗತಿ ಕುಂಠಿತವಾಗುತ್ತದೆ ಎಂಬ ಬಗ್ಗೆ ಸರಕಾರದ ಹಾಗೂ ಸಾರ್ವಜನಿಕರ ಗಮನ ಸೆಳೆಯುವುದರ ಜೊತೆಗೆ ಈ ರಾಜ್ಯದ ಜನಪ್ರತಿನಿಧಿಗಳ ಗಮನ ಸೆಳೆಯುವುದು ಅವಶ್ಯವೆನಿಸುತ್ತದೆ. ಈ ಬಗ್ಗೆ ದಿನಾಂಕ : 19–9–2014 ರಂದು ಬೆಂಗಳೂರಿನಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಸಭೆಯಲ್ಲಿ ಭಾಗವಹಿಸಿದ್ದ 126 ಸೌಹಾರ್ದ ಸಹಕಾರಿಗಳ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಭಾಗದ ಜನಪ್ರತಿನಿಧಿಗಳ ಗಮನಕ್ಕೆ, ಮಾನ್ಯ ಸಹಕಾರ ಸಚಿವರ ಗಮನಕ್ಕೆ ಈ ವಿಷಯವನ್ನು ತುರ್ತಾಗಿ ಗಮನಹರಿಸುವಂತೆ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಧಕ್ಕೆ ಆಗದಂತೆ ಸೌಹಾರ್ದ ಸಹಕಾರಿಗಳ ಸ್ವಾಯತ್ತತೆಗೆ ಚ್ಯುತಿಯಾಗದಂತೆ ಅಭಿವೃದ್ಧಿಗೆ ಪೂರಕವಾಗುವಂತೆ ಕ್ರಮವಿಡಲು ತಾವುಗಳೆಲ್ಲ ಪ್ರಯತ್ನಿಸುವುದು ಸದ್ಯದ ಅಗತ್ಯತೆ. ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಲು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಮನವಿ ಮಾಡುತ್ತೇನೆ.

ಮಾನ್ಯ ಸಹಕಾರ ಸಚಿವರಾದ ಶ್ರೀ ಎಚ್.ಎಸ್. ಮಹದೇವಪ್ರಸಾದ್ ಅವರು ಸೌಹಾರ್ದ ಸಹಕಾರಿಗಳ ಆಶಯಕ್ಕೆ ಸ್ಪಂಧಿಸುತ್ತಾ ಬಂದಿದ್ದಾರೆ. ಮುಂದೆಯೂ ಕೂಡ ನಮ್ಮ ಮನವಿಗಳಿಗೆ ಸ್ಪಂಧಿಸುತ್ತಾರೆಂಬ ಆಶಯದೊಂದಿಗೆ ನಿಮ್ಮೆಲ್ಲರ ಪರವಾಗಿ ವಿನಂತಿಸುತ್ತೇನೆ.

▶▶ **ಗುರುನಾಥ ಜಾಂತಿಕರ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

## ಒಳ ಪುಟಗಳಲ್ಲಿ . . .

ಮಂಗಳ ಮಹಾಯಾನದಲ್ಲಿ ಇಸ್ರೊ ಇತಿಹಾಸ .......... 4

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ............... 5

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಂದ ವಾರ್ಷಿಕ ಸಾಮಾನ್ಯ ಸಭೆ ................................ 6,7,8,9,10,11

ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅಂತರಾಜ್ಯ ಯಶಸ್ವಿ ಅಧ್ಯಯನ ಪ್ರವಾಸ ....................... 12,13,14

ಆಂತರಿಕ ಸಂಬಂಧವು ಕುಟುಂಬ ಹಾಗೂ ಸಹಕಾರ ಕ್ಷೇತ್ರಕ್ಕೂ ಅನಿವಾರ್ಯ – ಬಿ.ಎ.ಮಹದೇವಪ್ಪ .......... 17

ಅಭಿನಂದನೆಗಳು ................................................ 18

ಲೇಖನ ........................................................... 19

ಮಹಿಳೆ ಸ್ವಾವಲಂಬನೆಗೆ ಅವಕಾಶಗಳ ಸದ್ಬಳಕೆ ಅಗತ್ಯ – ಶ್ರೀಮತಿ ಮಂಜುಳಾ ಮಾನಸ ........................ 20

# ಸಂಪಾದಕೀಯ

## "ಸ್ವಚ್ಛ ಭಾರತ" ಅಭಿಯಾನದಲ್ಲಿ ಸೌಹಾರ್ದ ಸಹಕಾರಿಗಳು ಮೊದಲಿಗರಾಗಿ

ಭಾರತದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ದೇಶದ ಜನತೆಗೆ ಸ್ವಚ್ಛ ಭಾರತ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಅಧಿಕೃತವಾಗಿ 2ನೇ ಅಕ್ಟೋಬರ್ ಗಾಂಧಿ ಜಯಂತಿಯ ದಿನದಂದು ಚಾಲನೆ ನೀಡಿದ್ದಾರೆ. ದೇಶಕ್ಕೆ ಸ್ವಾತಂತ್ರ ತಂದುಕೊಟ್ಟ ಮಹಾತ್ಮ ಗಾಂಧಿಜಿಯವರಿಗೆ ನಾವು ಸಲ್ಲಿಸುವ ಕಾಣಿಕೆ ಹಾಗೂ ನಮನ ಇದಾಗಿದೆ. ದೇಶದ ಎಲ್ಲ ಸಹಕಾರಿ ಕಚೇರಿಗಳಲ್ಲಿ ಹಾಗೂ ಎಲ್ಲ ಸ್ಥಳಗಳಲ್ಲಿ ಪರಿಸರ ಸ್ವಚ್ಛತೆಯಾಗಿಸುವಲ್ಲಿ ದೇಶದ ಪ್ರತಿಯೊಬ್ಬರು ತಮ್ಮ ಪಾಲಿನ ಕೆಲಸವನ್ನು ಮಾಡಿದರೆ ಇಡೀ ದೇಶವೆ ಸ್ವಚ್ಛವಾಗಿ ಮಲಿನತೆಯಿಂದ ಮುಕ್ತವಾಗುತ್ತದೆ. ಮನಸ್ಸು ಶುದ್ಧವಾಗುತ್ತದೆ. ಹೊಸ ಉತ್ಸಾಹ ತುಂಬುತ್ತದೆ. ಕಾರ್ಯಚಟುವಟಿಕೆಗಳಲ್ಲಿ ನೈಪುಣ್ಯತೆ ಹೆಚ್ಚಿಸಿಕೊಳ್ಳುವ ಆಸಕ್ತಿ ಮೂಡುತ್ತದೆ. ಪೈಪೋಟಿ ಯುಗದಲ್ಲಿ ಬಾಳಿ ಬದುಕುವ ದಾರಿ ಸುಗಮವಾಗುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ದಿನಾಂಕ : 28/9/2014 ರಂದು ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಲ್ಲಿ ಕಚೇರಿಯ ಆವರಣವನ್ನು ಸ್ವಚ್ಛಮಾಡುವುದರ ಜೊತೆಗೆ ಕಚೇರಿಯ ಒಳಗಿನ ವಾತಾವರಣವನ್ನು ಸ್ವಚ್ಛಮಾಡುವ ಕಾರ್ಯಕ್ರಮವನು ಹಮ್ಮಿಕೊಂಡಿದ್ದು ಸ್ವಾಗತಾರ್ಹವಾಗಿತ್ತು. ನಾನು, ನಾವು, ನಮ್ಮ ಮನೆ, ಸಮಾಜ, ಗ್ರಾಮ, ನಗರ, ಜಿಲ್ಲೆಗಳು, ರಾಜ್ಯ ಕೊನೆಗೆ ದೇಶ ತಾನೇ ತಾನಾಗಿ ಸ್ವಚ್ಛವಾಗುತ್ತದೆ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಸೌಹಾರ್ದ ಸಹಕಾರಿಗಳ ಕಚೇರಿಯ ಒಳಗೆ ಹಾಗೂ ಹೊರಗೆ ಎಲ್ಲ ವಾತಾವರಣಗಳನ್ನು ಪರಿಸರವನ್ನು ಸ್ವಚ್ಛವಾಗಿಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಮತ್ತು ಈ ಕಾರ್ಯಕ್ರಮ ನಿರಂತರವಾಗಿ ನಡೆಯಬೇಕು. ಸೌಹಾರ್ದ ಸಹಕಾರಿಗಳು ರಾಜ್ಯದ ಇತರೆ ಸಹಕಾರಿ ಸಂಸ್ಥೆಗಳು ಈ ಅಭಿಯಾನವನ್ನು ಪ್ರಾರಂಭಿಸುವ ಮೊದಲು ನೀವು ಪ್ರಾರಂಭಿಸಿ, ನೀವೇ ಮೊದಲಿಗರಾದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಸಾಧನೆಗೆ ಇದು ಹೆಮ್ಮೆಯ ಹಾಗೂ ಗೌರವದ ವಿಷಯವಾಗುತ್ತದೆ. ಸ್ಥಳೀಯ ಸಂಸ್ಥೆಗಳ ಮುಖಂಡರ ಅಧಿಕಾರಿಗಳ ಗಮನಕ್ಕೆ ತನ್ನಿ. ಅವರನ್ನು ಈ ಕಾರ್ಯಕ್ಕೆ ಪ್ರೇರೇಪಿಸಿ. ನೀವು ಹಮ್ಮಿಕೊಂಡ ಈ ಅಭಿಯಾನ ಕಾರ್ಯಕ್ರಮ ಇತರರಿಗೆ ಮಾದರಿಯಾಗಲಿ. ಇದರಿಂದ ನಿಮಗೆ ಸಾರ್ವಜನಿಕರ ಮನ್ನಣೆ ಹಾಗೂ ಸರಕಾರದ ಮನ್ನಣೆ ಹೆಚ್ಚುತ್ತದೆ. ದೇಶಕ್ಕೆ ಸೇವೆ ಸಲ್ಲಿಸಿದಂತಾಗುತ್ತದೆ. ನಿಮ್ಮ ಪರಿಸರ ಸ್ವಚ್ಛವಾಗಿರುತ್ತದೆ. ನೀವು ದೈಹಿಕವಾಗಿ ಮಾನಸಿಕವಾಗಿ ಆರೋಗ್ಯವಂತರಾಗಿ ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ. ■

# ಮಂಗಳ ಮಹಾಯಾನದಲ್ಲಿ ಇಸ್ರೊ ಇತಿಹಾಸ



**ಬೆಂಗಳೂರು :** ಭಾರತದ ಮೊತ್ತಮೊದಲ ಅಂತರ ಗ್ರಹ ಕಾರ್ಯಕ್ರಮ 'ಮಂಗಳಯಾನ' (ಮಾರ್ಸ್ ಆರ್ಬಿಟರ್ ಮಿಷನ್) ನೌಕೆ ಸೆಪ್ಟೆಂಬರ್ 24ರ ಬೆಳಗ್ಗೆ 7.54ಕ್ಕೆ ಮಂಗಳನ ಕಕ್ಷೆ ಸೇರುವ ಮೂಲಕ ದೇಶದ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಇತಿಹಾಸ ಸೃಷ್ಟಿಸಿತು. ಈ ಅದ್ವಿತೀಯ ಸಾಧನೆಗೆ ದೇಶದಲ್ಲಿ ಸಂತಸದ ಹೊನಲು ಹರಿದಿದೆ.

ಕಳೆದ ವರ್ಷ ನವೆಂಬರ್ 5ರಂದು ಹೊರಟ ಈ ನೌಕೆ ಒಟ್ಟು 300 ದಿನಗಳ ಬಾಹ್ಯಾಂತರಿಕ್ಷದ ಯಾತ್ರೆ ಕೈಗೊಂಡು ಕೆಂಪುಗ್ರಹದ ಕಕ್ಷೆ ತಲುಪಿತು. ಈ ಮೂಲಕ ಚೊಚ್ಚಲ ಯತ್ನದಲ್ಲೇ ಯಶಸ್ಸು ಗಳಿಸಿದ ಜಗತ್ತಿನ ಮೊದಲ ರಾಷ್ಟ್ರ ಎಂಬ ಕೀರ್ತಿಗೆ ಭಾರತ ಪಾತ್ರವಾಯಿತು ಮತ್ತು ಮಂಗಳನ ಕಕ್ಷೆಗೆ ನೌಕೆ ಕಳುಹಿಸಿದ ಏಷ್ಯಾದ ಮೊದಲ ರಾಷ್ಟ್ರ ಎನಿಸಿಕೊಂಡಿತು. ಅಲ್ಲದೆ ಮಂಗಳಗ್ರಹಕ್ಕೆ ಯಶಸ್ವಿಯಾಗಿ ನೌಕೆಗಳನ್ನು ಕಳುಹಿಸಿದ ಅಮೆರಿಕ, ರಷ್ಯಾ, ಐರೋಪ್ಯ ಒಕ್ಕೂಟದ ಸಾಲಿಗೆ ಸೇರ್ಪಡೆಯಾಯಿತು.

ಮೊದಲ ಬಾರಿಗೆ ಅಂಗಾರಕನ ಕಕ್ಷೆಗೆ ನೌಕೆ ಕಳುಹಿಸಲು ಮುಂದಾಗಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮೇಲೆ ಇಡೀ ಜಗತ್ತು ಕುತೂಹಲದ ದೃಷ್ಟಿ ಇಟ್ಟಿತ್ತು. ಮೊದಲ ಯತ್ನದಲ್ಲೇ ಯಶಸ್ಸು ಗಳಿಸುವ ಮೂಲಕ ಜಗತ್ತೇ ನಿಬ್ಬೆರಗಾಗುವಂತಹ ಸಾಧನೆ ಮಾಡಿದೆ.

**ಸಾಧನೆಯ ಆ ಕ್ಷಣ :** ಭಾರತದ ಬಾಹ್ಯಾಕಾಶ ವಿಜ್ಞಾನದಲ್ಲೇ ಮಹತ್ವದ ಮೈಲುಗಲ್ಲಿಗೆ ಕಾರಣವಾದ ಕ್ಷಣವದು. ಇಸ್ರೊ ವಿಜ್ಞಾನಿಗಳ ಹಲವು ವರ್ಷದ ಕನಸು, ಕೋಟ್ಯಂತರ ಜನರ ನಿರೀಕ್ಷೆ, ಕಾತರ, ಕುತೂಹಲ ಸಾಕಾರಗೊಂಡ ಕ್ಷಣ ಅದಾಗಿತ್ತು. ಪೀಣ್ಯದಲ್ಲಿರುವ ಇಸ್ರೊದ ಟೆಲಿಮೆಟ್ರಿ ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್ವರ್ಕ್‌ನ (ಇಸ್ಟ್ರ್ಯಾಕ್) ಗಗನನೌಕೆ ನಿಯಂತ್ರಣಾ ಕೇಂದ್ರದಲ್ಲಿ ಅಂತಿಮ ಹಂತದ ಕಾರ್ಯಾಚರಣೆಯನ್ನು ವೀಕ್ಷಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ವಿಜ್ಞಾನಿಗಳ ಸಾಧನೆಗೆ ಅಭಿನಂದನೆಯ ಮಹಾಪೂರ ಹರಿಸಿದರು. ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯು ಇಸ್ರೋದ ಸಮಸ್ತ ವಿಜ್ಞಾನಿಗಳನ್ನು ಅಭಿನಂದಿಸುತ್ತದೆ.

## ಸಂಯುಕ್ತ ಸಹಕಾರಿಯ ಅಧ್ಯಕ್ಷರಿಂದ ರಾಜ್ಯಪಾಲರ ಭೇಟಿ



ಇತ್ತೀಚೆಗೆ ಬೀದರ್‌ಗೆ ಭೇಟಿ ನೀಡಿದ್ದ ನೂತನ ರಾಜ್ಯಪಾಲ ಶ್ರೀ ವಾಜುಭಾಯಿ ರುಡಾಭಾಯಿ ವಾಲಾರವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ಅವರು ಭೇಟಿ ಮಾಡಿ ಅಭಿನಂದಿಸಿ, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

## ನೂತನ ಕಟ್ಟಡ ಉದ್ಘಾಟನೆ




ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನೂತನ ಕಟ್ಟಡ ಸಮಾರಂಭವನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಶ್ರೀ ಎಚ್.ಕೆ. ಪಾಟೀಲ್ ಉದ್ಘಾಟಿಸಿದರು.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮತ್ತು ಜೇಸಿಸ್ ಸಹಯೋಗದಲ್ಲಿ "ಆಹಾರ ಬಳಕೆ-ಉಳಿಕೆ" ಮಾಹಿತಿ ಕಾರ್ಯಕ್ರಮ ಹಾಗೂ ಕರಪತ್ರ ಬಿಡುಗಡೆ ಸಮಾರಂಭ



**ಪುತ್ತೂರು :** ಇಲ್ಲಿನ ದರ್ಬೆಯಲ್ಲಿ ಕೇಂದ್ರ ಕಛೇರಿಯನ್ನು ಹೊಂದಿ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಾಮಾಜಿಕ ಜಾಗೃತಿ ಕಾರ್ಯಕ್ರಮದ ಭಾಗವಾಗಿ ಈಗಾಗಲೇ ವಿವಿಧ ಹೋಟೆಲುಗಳಲ್ಲಿ, ಸಭಾಂಗಣಗಳಲ್ಲಿ, ಶಾಲೆಗಳಲ್ಲಿ ಆಹಾರದ ಪಾವಿತ್ರ್ಯತೆಯನ್ನು ಸಾರುವ ಫಲಕಗಳನ್ನು ಅಳವಡಿಸುವ ಮೂಲಕ ಆಹಾರದ ಬಳಕೆಯ ಕುರಿತಾಗಿ ಜಾಗೃತಿಯನ್ನು ಮೂಡಿಸುತ್ತಿದ್ದು, ಇದನ್ನು ಪರಿಣಾಮಕಾರಿಯಾಗಿ ನಡೆಸುವ ಸಲುವಾಗಿ ಪುತ್ತೂರಿನ ಜೇಸಿಸ್‌ನ ಸಹಯೋಗದೊಂದಿಗೆ ಸಹಕಾರಿಯ 13ನೇ ವಾರ್ಷಿಕ ಮಹಾಸಭೆಯ ಸುಸಂದರ್ಭದಲ್ಲಿ "ಆಹಾರ ಬಳಕೆ-ಉಳಿಕೆ" ಎಂಬ ವಿಷಯದ ಕುರಿತಾಗಿ ಮಾಹಿತಿ ಕಾರ್ಯಕ್ರಮ ಮತ್ತು ಕರಪತ್ರ ಬಿಡುಗಡೆ ಸಮಾರಂಭವು ನಡೆಯಿತು.

ಪುತ್ತೂರು ಜೇಸಿಸ್ ಉಪಾಧ್ಯಕ್ಷರಾದ ಜೇಸಿ ಡಾ. ರಾಜೇಶ್ ಬೆಜ್ಜಂಗಳರವರು ಮಾಹಿತಿಯನ್ನು ನೀಡುತ್ತಾ ಆಹಾರವನ್ನು ಉಪಯೋಗಿಸುವ ರೀತಿ ಮತ್ತು ಕಾಳಜಿಯ ಕುರಿತಾಗಿ ಹೇಳಿದರು. ಕರಪತ್ರವನ್ನು ವಿಧಾನ ಪರಿಷತ್‌ನ ಮಾಜಿ ಸದಸ್ಯರಾದ ಶ್ರೀ ಅಣ್ಣಾ ವಿನಯಚಂದ್ರರವರು ಬಿಡುಗಡೆಗೊಳಿಸಿದರು.

ಪುತ್ತೂರಿನ ಜೇಸಿಸ್ ಅಧ್ಯಕ್ಷರಾದ ಜೇಸಿ ಕೃಷ್ಣ ನಾರಾಯಣ ಮುಳಿಯ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ ಮುಂತಾದವರು ಉಪಸ್ಥಿತರಿದ್ದರು.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮತ್ತು ಸ್ವಸಹಾಯ ಸಂಘದ ರಚನೆ

ಸಹಕಾರಿಯ ಪ್ರಾಯೋಜಕತ್ವದಲ್ಲಿ ಆರಂಭಗೊಳ್ಳಲಿರುವ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ನಡಿಯಲ್ಲಿ ಕಾರ್ಯಪ್ರವೃತ ಗೊಳ್ಳಲಿರುವ ಮೊದಲ ಸ್ವ ಸಹಾಯ ಸಂಘದ ಪದಾಧಿಕಾರಿಗಳಿಗೆ ಈ ಸಂದರ್ಭದಲ್ಲಿ ಸ್ವಸಹಾಯ ಸಂಘದ ವರದಿ ಪುಸ್ತಕವನ್ನು ಹಸ್ತಾಂತರಿಸಲಾಯಿತು.

ಬೆಂಗಳೂರು ನಗರದಲ್ಲಿ 2 ಶಾಖೆಗಳು ಸೇರಿದಂತೆ ಒಟ್ಟು 10 ಶಾಖೆಗಳಲ್ಲಿ ಆಕರ್ಷಕ ಬಡ್ಡಿದರದಲ್ಲಿ ಠೇವಣಿ ಸ್ವೀಕಾರ, ವಿವಿಧ ಸಾಲಗಳು, ಇ-ಸ್ಟಾಂಪಿಂಗ್, ವೆಸ್ಟರ್ನ್ ಯೂನಿಯನ್ ಹಣ ವರ್ಗಾವಣೆ, ಜೀವ ಹಾಗೂ ಸಾಮಾನ್ಯ ವಿಮೆಗಳು, ಪಾನ್ ಕಾರ್ಡ್, RTGS, NEFT ಸೇಫ್ ಲಾಕರ್ ಮುಂತಾದ ಸೌಲಭ್ಯವನ್ನು ನೀಡುತ್ತಿದೆ.

ಅಲ್ಲದೆ ದರ್ಬೆ ಶಾಖೆಯಲ್ಲಿ ಕೆ.ಎಸ್.ಆರ್.ಟಿ.ಸಿ ಟಿಕೇಟ್ ಬುಕ್ಕಿಂಗ್ ಸೌಲಭ್ಯ ನೀಡುತ್ತಿದೆ. ಶೀಘ್ರದಲ್ಲೆ ಪುತ್ತೂರು ತಾಲ್ಲೂಕಿನ ಕಡಬ, ಹಾಗೂ ಬಂಟ್ವಾಳ ತಾಲ್ಲೂಕಿನ ವಿಟ್ಲದಲ್ಲಿ ಸಹಕಾರಿಯ ನೂತನ ಶಾಖೆಗಳು ಆರಂಭಗೊಳ್ಳಲಿದೆ.



## ಹಿರಿಯ ಸಹಕಾರಿ ಪೆರಾಜೆ ಶ್ರೀನಿವಾಸರಾವ್ ನಿಧನ

ರಾಜ್ಯದ ಹಿರಿಯ ಸಹಕಾರಿ ಕರ್ನಾಟಕ ರಾಜ್ಯ ಸರಕಾರದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾಗಿದ್ದ ಶ್ರೀ ಪೆರಾಜೆ ಶ್ರೀನಿವಾಸರಾಯರು 25-9-2014 ರಂದು ಮಣಿಪಾಲದ ಆಸ್ಪತ್ರೆಯಲ್ಲಿ ನಿಧನರಾದರು. ಕರ್ನಾಟಕದ ಸಹಕಾರ ಕ್ಷೇತ್ರದ ವಿಶೇಷವಾಗಿ ಸಹಕಾರಿ ಕಾನೂನಿನ ಮತ್ತು ಸಹಕಾರಿ ತತ್ವಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದ ಶ್ರೀಯುತರು ಅನೇಕ ಯುವ ಸಹಕಾರಿ ನಾಯಕರಿಗೆ ಮಾರ್ಗದರ್ಶಕರಾಗಿದ್ದರು. ಶ್ರೀಯುತರ ನಿಧನಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸಂತಾಪ ವ್ಯಕ್ತ ಪಡಿಸಿದ್ದಾರೆ.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಮಹಾಸಭೆ

## ರೂ. 1.39 ಕೋಟಿ ನಿವ್ವಳ ಲಾಭ, ಶೇ 15 ಡಿವಿಡೆಂಡ್ ಘೋಷಣೆ




**ಪುತ್ತೂರು :** ಇಲ್ಲಿನ ದರ್ಬೆಯಲ್ಲಿ ಕೇಂದ್ರ ಕಛೇರಿಯನ್ನು ಹೊಂದಿ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಮಹಾಸಭೆಯು ದಿನಾಂಕ 14-09-2014ರಂದು ಪುತ್ತೂರಿನ ಬೈಪಾಸ್ ರಸ್ತೆಯ ಜೈನ ಭವನದಲ್ಲಿ ನಡೆಯಿತು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರರವರು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿ ಮಾತನಾಡುತ್ತಾ, ಜಗತ್ತಿನಲ್ಲಿ ಭಾರತ ಯುವಕರ ದೇಶ, ಯುವಕರನ್ನು ಸಹಕಾರ ಕ್ಷೇತ್ರಕ್ಕೆ ಸೆಳೆಯಲು ಬದಲಾವಣೆ ಮಾಡಬೇಕಾಗುತ್ತದೆ. ಅದರಂತೆ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸಕಾರಾತ್ಮಕ ತಿದ್ದುಪಡಿಗಳನ್ನು ಮಾಡಿ ಸೌಹಾರ್ದ ಸಹಕಾರಿಗಳನ್ನು ಮಿನಿ ಬ್ಯಾಂಕ್ ಆಗಿ ಪರಿಗಣಿಸಲು ಹಾಗೂ ಚೆಕ್ ಸೌಲಭ್ಯ, ಕ್ಲಿಯರಿಂಗ್ ಸೌಲಭ್ಯ, ಎ. ಟಿ. ಎಂ ಸೌಲಭ್ಯ, ಏಕರೂಪದ ಅಕೌಂಟಿಂಗ್ ವ್ಯವಸ್ಥೆಗಳಿಗೆ ಅವಕಾಶ ನೀಡಲು ಮನವಿ ಮಾಡಲಾಗುತ್ತಿದೆ. ನಮ್ಮ ಸಂಸ್ಥೆಯು ಕೇವಲ ಆರ್ಥಿಕ ಚಟುವಟಿಕೆಗಳು ಮಾತ್ರವಲ್ಲದೆ ಸಾಮಾಜಿಕ ಜಾಗೃತಿ, ಸ್ವ-ಸಹಾಯ ಸಂಘಗಳ ರಚನೆ, ಆರ್ಥಿಕ ಸಾಕ್ಷರತೆ, ಮಹಿಳಾ ಸಬಲೀಕರಣ ಮುಂತಾದ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಚಾರಿಟೇಬಲ್ ಟ್ರಸ್ಟ್ ಅನ್ನು ರಚಿಸಲು ಮಹಾಸಭೆಯ ಅನುಮತಿ ಕೇಳಿದರು.

# ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸಹಕಾರಿಗಳ ನಿಬಂಧಕ ಶ್ರೀ ಚನ್ನಪ್ಪಗೌಡ

ಸಹಕಾರಿಗಳ ನಿಬಂಧಕರಾದ ಶ್ರೀ ಎನ್.ಎಸ್.ಚನ್ನಪ್ಪಗೌಡ ಐ.ಎ.ಎಸ್. ರವರು 6-9-2014 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಇತ್ತಿಚಿನ ಎಲ್ಲ ತಿದ್ದುಪಡಿಗಳಲ್ಲಿ ಆಗಿರುವ ತೊಂದರೆಗಳನ್ನು ನಿವಾರಿಸಲು ಕ್ರಮವಿಡುವುದಾಗಿ ತಿಳಿಸಿದರು. ವಿವಿಧೋದ್ದೇಶ ಸೌಹಾರ್ದ ಸಹಕಾರಿಗಳ ನೊಂದಣೆಗೆ ಸಂಬಂದಿಸಿದಂತೆ ಹೊರಡಿಸಿರುವ ಸುತ್ತೋಲೆಯಲ್ಲಿ ಆಕ್ಷೇಪಾರ್ಹ ಅಂಶಗಳನ್ನು ತೆಗೆದುಹಾಕುವುದಾಗಿ ತಿಳಿಸಿದರು. ಅಸ್ಸೋಸಿಯೇಟ್ ಸದಸ್ಯತ್ವದ ಪ್ರಮಾಣದ ಸಂಖ್ಯೆಯನ್ನು 1959ರ ಕಾಯ್ದೆಯಲ್ಲಿಯಂತೆಯೆ ಶೇ. 15ಕ್ಕೆ ಹೆಚ್ಚಿಸಲು ಕ್ರಮವಿಡುವುದಾಗಿ ತಿಳಿಸಿದರು.



## ಅಧಿಪತಿ ಸೌಹಾರ್ದ ಸಹಕಾರಿ ನಿ., : ಅನುಮತಿ ಹಿಂಪಡೆ

ಕರ್ನಾಟಕ ಸರ್ಕಾರ, ಸಹಕಾರ ಇಲಾಖೆ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರು ಉದ್ದೇಶಿತ ಅಧಿಪತಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ ನೋಂದಣಿ ಪೂರ್ವ ಷೇರು ಸಂಗ್ರಹಿಸಲು ಅನುಮತಿ ನೀಡಿ 60 ದಿವಸದೊಳಗಾಗಿ ಷರತ್ತುಗಳನ್ನು ಪೂರೈಸಿ ನೋಂಣಿಗೆ ಪ್ರಸ್ತಾವೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ ಷೇರು ಸಂಗ್ರಹಣೆಗೆ ನೀಡಿರುವ ಕಾಲಾವಧಿಯು ಮುಗಿದಿರುತ್ತದೆ. ಇನ್ನು ಮುಂದೆ ಸಾರ್ವಜನಿಕರಿಂದ ಷೇರು ಹಣ ಸಂಗ್ರಹಿಸದಿರಲು ಮತ್ತು ಈಗಾಗಲೇ ಸಂಗ್ರಹಿಸಿರುವ ಷೇರುಹಣವನ್ನು ನಿಯಮಾನುಸಾರ ಸಂಬಂಧಿಸಿದವರಿಗೆ ಹಿಂತಿರುಗಿಸಲು ಸೂಚಿಸಿದೆ. ಎಂದು ಡಾ॥ ಎನ್.ಎಸ್.ಚನ್ನಪ್ಪಗೌಡ ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ಇವರು ದಿನಾಂಕ 08.09.2014 ರಂದು ಸಂಯುಕ್ತ ಸಹಕಾರಿಗೆ ಪತ್ರದ ಮೂಲಕ ತಿಳಿಸಿರುತ್ತಾರೆ.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ

## ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ 13ನೇ ಸಾಮಾನ್ಯ ಸಭೆ :

## ರಾಜಕೀಯ ಹಸ್ತಕ್ಷೇಪ ಸಹಕಾರಿ ಕ್ಷೇತ್ರದ ಪ್ರಗತಿಗೆ ಮಾರಕ – ಕೇಂದ್ರ ರೇಲ್ವೆ ಸಚಿವ ಶ್ರೀ ಡಿ.ವಿ.ಸದಾನಂದಗೌಡ

ಕೇಂದ್ರ ರೇಲ್ವೆ ಸಚಿವ ಶ್ರೀ ಡಿ.ವಿ.ಸದಾನಂದಗೌಡರವರು ದಿ.ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರ ಕ್ಷೇತ್ರದಲ್ಲಿ ಇತ್ತೀಚಿನ ತಿದ್ದುಪಡಿಗಳಿಂದಾಗಿ ಸರಕಾರದ ಹಾಗೂ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶವಾಗಿರುವುದು ಸಹಕಾರ ಕ್ಷೇತ್ರದ ಪ್ರಗತಿಗೆ ಮಾರಕವಾಗಿದೆ ಎಂದು ಹೇಳಿದ ಶ್ರೀಯುತರು ರಾಷ್ಟ್ರದ ಪ್ರಗತಿಗೆ ಸಹಕಾರ ಕ್ಷೇತ್ರ ತನ್ನದೇ ಆದ ಮಹತ್ತರ ಕಾಣಿಕೆ ನೀಡುತ್ತ ಬಂದಿದೆ ಎಂದರು.

ಕಾರ್ಯಕ್ರಮದಲ್ಲಿ ಯಲಹಂಕ ಕ್ಷೇತ್ರದ ಶಾಸಕ ಶ್ರೀ ಎಸ್.ಆರ್. ವಿಶ್ವನಾಥರವರು ಸಹಕಾರಿಯ ಬೆಳವಣಿಗೆಯ ಬಗ್ಗೆ ಪ್ರಶಂಸೆ ವ್ಯಕ್ತ ಪಡಿಸಿದರು. ಸುಕೋ ಬ್ಯಾಂಕ್ ಅಧ್ಯಕ್ಷ ಮಾಜಿ ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿಯವರು ಮುಖ್ಯ ಅತಿಥಿಗಳಾಗಿ



ಭಾಗವಹಿಸಿ ಸಹಕಾರಿಯ 10 ಜನ ಗಣ್ಯರಿಗೆ, ಸದಸ್ಯರಿಗೆ ಹಾಗೂ ಅವರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪ್ರಾರಂಭದಲ್ಲಿ ಸಹಕಾರಿಯ ಸದಸ್ಯರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಎಲ್ಲರನ್ನು ಸ್ವಾಗತಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹಾಸನದ ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,




ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಹಾಸನ. ಇದರ 10ನೇ ಸಾಮಾನ್ಯ ಸಭೆ ದಿನಾಂಕ : 24.08.2014ರಂದು ನಡೆಯಿತು.

## ಕಲಾವಿದರ ವಿವಿಧೋದ್ದೇಶ ಸೌಹಾರ್ದ ಪತ್ತಿನ ಸಹಕಾರಿ ನಿ., : ಸರ್ವ ಸದಸ್ಯರ ಸಭೆ

ಸಹಕಾರಿಯ ಅಧ್ಯಕ್ಷ ಶ್ರೀ ಎಂ.ಎನ್.ಸುಂದರರಾಜ್ ಅವರ ಅಧ್ಯಕ್ಷತೆಯಲ್ಲಿ ಪ್ರಥಮ ಸರ್ವ ಸದಸ್ಯರ ಸಭೆ ನಡೆಯಿತು. ನಿರ್ದೇಶಕ ಜಿ.ಆರ್. ಕೇಶವಮೂರ್ತಿ ಎಲ್ಲರನ್ನೂ ಸ್ವಾಗತಿಸಿದರು. 2014–15ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಓದಿದ ನಂತರ ಎಲ್ಲರೂ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು. ಸದಸ್ಯರಿಂದ ಬಂದ ಸಲಹೆಗಳನ್ನು ಚರ್ಚಿಸಿ, ಅವುಗಳಲ್ಲಿ ಸಹಕಾರಿಯ ಬೆಳವಣಿಗೆಗೆ ಅನುಕೂಲವಾಗುವ ಸಲಹೆಗಳನ್ನು ಒಪ್ಪಲಾಯ್ತು. ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಎಂ.ಎನ್.ಸುಂದರರಾಜ್ ಅವರು ಸಹಕಾರಿಯ ಬೆಳವಣಿಗೆಗೆ ಎಲ್ಲ ಸದಸ್ಯರ ಸಹಕಾರವನ್ನು ಯಾಚಿಸಿದರು. ಸದಸ್ಯರ ಪುರೋಭಿವೃದ್ಧಿಗೆ ಕೈಗೊಳ್ಳುವ ಕೆಲವು ಕಾರ್ಯಕ್ರಮಗಳನ್ನು ಪ್ರಕಟಿಸಲಾಯ್ತು. ಅದರಲ್ಲಿ ವಿದ್ಯಾನಿಧಿ ಸ್ಥಾಪನೆ, ಸಂಕಷ್ಟ ನಿವಾರಣೆ ನಿಧಿ ಸ್ಥಾಪನೆ, ಆಪತ್ ಬಂಧು ಠೇವಣಿ ಯೋಜನೆಗಳ ಬಗ್ಗೆ ವಿವರಣೆ ನೀಡಿ ಅವುಗಳ ಯಶಸ್ಸಿಗೆ ಸದಸ್ಯರ ಸಹಕಾರ ಕೋರಿದರು. ಕಾರ್ಯಕಾರಿ ಸದಸ್ಯ ಶ್ರೀ ಓಂ ಗಣೇಶ್ ಶೇಠ್ ರವರು ಸರ್ವರನ್ನೂ ವಂದಿಸಿದರು.

## ಕರ್ನಾಟಕ ರಾಜ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್



ಕರ್ನಾಟಕ ರಾಜ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್‌ನ 9ನೇ ಸಾಮಾನ್ಯ ಸಭೆಯನ್ನು ದಿನಾಂಕ : 20.09.2014ರಂದು ಬೆಂಗಳೂರಿನಲ್ಲಿ ನಡೆಸಲಾಯಿತು ಹಾಗೂ ದಕ್ಷಿಣ ಭಾರತ ಜೈನ ಸಭೆಯ ಅಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಾವಸಾಹೇಬ್ ಅ. ಪಾಟೀಲ ಆಯ್ಕೆಯಾಗಿರುವ ಹಿನ್ನಲೆಯಲ್ಲಿ ಅಸೋಸಿಯೇಷನ್‌ನ ಆಡಳಿತ ಮಂಡಳಿಯ ವತಿಯಿಂದ ಶ್ರೀಯುತರಿಗೆ ಸನ್ಮಾನಿಸಲಾಯಿತು.

## ನಗರ ಯಶಸ್ವಿನಿ : ನೋಂದಣೆಯ ಅವಧಿ ವಿಸ್ತರಣೆ

ಯಶಸ್ವಿನಿ ನಗರ ಆರೋಗ್ಯ ರಕ್ಷಣಾ ಯೋಜನೆಯ ನೋಂದಣೆಯ ಅವಧಿಯನ್ನು ದಿನಾಂಕ : 31-10-2014 ರವರೆಗೆ ವಿಸ್ತರಿಸಿ ರಾಜ್ಯ ಸರಕಾರ ಅಧಿಸೂಚನೆಯನ್ನು ಹೊರಡಿಸಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಈ ಅವಕಾಶವನ್ನು ಸದುಪಯೋಗಮಾಡಿಕೊಳ್ಳಲು ಸಂಯುಕ್ತ ಸಹಕಾರಿಯು ಸೂಚಿಸಿದೆ.

## ಶ್ರೀ ವರ್ಧಮಾನ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ.,



ಶ್ರೀ ವರ್ಧಮಾನ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಸಿಂಧನೂರು, ಇದರ 5ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ : 13/09/2014 ರಂದು ಹೊಸಾ ತೇರಾಪಂಥ ಭವನ, ಸಿಂಧನೂರಿನಲ್ಲಿ ಯಶಸ್ವಿಯಾಗಿ ಜರುಗಿತು.

## ಸನ್ ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು



ಸನ್ ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಇದರ ವಾರ್ಷಿಕ ಸಭೆ

## ಶ್ರೀ ಶಬರಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ.,



ಬೆಳಗಾವಿಯ ಶ್ರೀ ಶಬರಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಮನಿಹಾಳ, ಸಂಸ್ಥೆಯ ಉದ್ಘಾಟನೆಯನ್ನು ಶ್ರೀ ಸಮರ್ಥ ಶಿವಾನಂದ ಮಹಾಸ್ವಾಮಿಗಳು ನೆರೆವೇರಿಸಿದರು.

## ವಂದೇಮಾತರಂ ವಿವಿದೋದ್ದೇಶ ಸೌಹಾರ್ದ ಸಹಕಾರಿ




ವಂದೇಮಾತರಂ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 4ನೇ ವರ್ಷದ ವಾರ್ಷಿಕ ಮಹಾಸಭೆ. ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ನಡೆಯಿತು.

## ಪರಿವರ್ತನಾ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ.,



ಪರಿವರ್ತನಾ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತದ 5ನೇ ವರ್ಷದ ವಾರ್ಷಿಕ ಮಹಾ ಸಭೆ.

## ಕೆ.ಎನ್.ಆರ್. ಸೆಂಟ್ಸ್ ಪತ್ತಿನ ಸೌಹಾರ್ದ ಸಹಕಾರಿ ನಿ.,



ಕೆ.ಎನ್.ಆರ್. ಸೆಂಟ್ಸ್ ಪತ್ತಿನ ಸೌಹಾರ್ದ ಸಹಕಾರಿ ನಿ., ಗುಬ್ಬಿ ಇದರ ಇ-ಸ್ಟಾಂಪಿಂಗ್ ಸೇವಾ ಸೌಲಭ್ಯವನ್ನು ಆರಂಭಿಸಲಾಯಿತು.

## ಭದ್ರಾವತಿಯ ಸುಭಾಷ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,



ಭದ್ರಾವತಿಯ ಸುಭಾಷ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ಯಲ್ಲಿ ದಿನಾಂಕ : 15.08.2014 ರಂದು 6ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಹಾಗೂ ನೂತನ ಕಛೇರಿ ಉದ್ಘಾಟನಾ ಸಮಾರಂಭ ನಡೆಯಿತು.

## ಜನಹಿತ ಸೌಹಾರ್ದ ಸಹಕಾರಿ ನಿ., ಉಡುಪಿ.




ಜನಹಿತ ಸೌಹಾರ್ದ ಸಹಕಾರಿ ನಿ., ಉಡುಪಿ. ಇದರ ಮಹಾಸಭೆಯು ದಿನಾಂಕ : 07.09.2014ರಂದು ಕೇಂದ್ರ ಕಚೇರಿ ಉಡುಪಿಯಲ್ಲಿ ಅಧ್ಯಕ್ಷರಾದ ಗೋಪಾಲ್ ಯು. ಇವರ ಅಧ್ಯಕ್ಷತೆಯಲ್ಲಿ ಜರಗಿತು.

## ದಿ ಸನ್‌ಸ್ಟಾರ್ ಸೌಹಾರ್ದ ಕ್ರೆಡಿಟ್ ಕೋ-ಅಪರೇಟೀವ್ ಲಿ.

ದಿ ಸನ್‌ಸ್ಟಾರ್ ಸೌಹಾರ್ದ ಕ್ರೆಡಿಟ್ ಕೋ-ಅಪರೇಟೀವ್ ಲಿ., 2ನೇ ವರ್ಷದ ಸರ್ವಸದಸ್ಯರ ಸಭೆಯು ದಿನಾಂಕ : 21-09-2014ರಂದು ಸಹಕಾರಿಯ ಕಛೇರಿಯ ಆವರಣದಲ್ಲಿ ನಡೆಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಪಟ್ಟದ ರಾಜೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಹಕಾರಿಯ ಅಧ್ಯಕ್ಷರಾದ ಎಲ್.ಹೇಮಂತಕುಮಾರ್ ರವರು ಮಾತನಾಡಿ ಸಹಕಾರಿಯು ಉತ್ತಮ ಸೇವೆ ಸಲ್ಲಿಸುತ್ತಿದ್ದು ನಮ್ಮ ಸದಸ್ಯರು ಈಗಾಗಲೆ ನಮ್ಮ ಸೇವೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಉಳಿದ ಸದಸ್ಯರುಗಳು ಉಪಯೋಗಿಸ ಕೊಳ್ಳಬೇಕೆಂದು ಕರೆ ನೀಡಿದರು.

ಶ್ರೀ ಡಾ|| ಸುಬ್ರಮಣ್ಯ ವೈಲಾಯ ರವರು ಈಗ ಪ್ರಾರಂಭಿಸಿರುವಂತಹ ಸೇಫ್ ಲಾಕರ್‌ನ್ನು ಉದ್ಘಾಟನೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಕಾರಿಯ ಆಡಳಿತ



ಮಂಡಳಿಯ ನಿರ್ದೇಶಕರು ಹಾಗೂ ಮುಖ್ಯ ಕಾರ್ಯ ನಿರ್ವಾಹಕರಾದ ಶ್ರೀ ಕೆ.ನಂದಕುಮಾರ್‌ರವರು ಮತ್ತು ಸಿಬ್ಬಂದಿಯವರು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

## ನಂದನ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ.,



ನಂದನ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಇದರ 2ನೇ ವರ್ಷದ ಸಾಮಾನ್ಯ ಸಭೆ ದಿನಾಂಕ : ಆಗಸ್ಟ್ 24ರಂದು ನಡೆಸಲಾಯಿತು.

## ನಿರ್ಮಾಣ್ ವಿವಿದೋದ್ಧೇಶ ಸೌಹಾರ್ದ ಸಹಕಾರಿ



ನಿರ್ಮಾಣ್ ವಿವಿದೋದ್ಧೇಶ ಸೌಹಾರ್ದ ಸಹಕಾರಿ, ನಿ ಉಡುಪಿ ಸಹಕಾರಿಯ ವಾರ್ಷಿಕ ಸಾಮಾನ್ಯ ಮಹಾಸಭೆ ದಿ : 06-09-2014ನೇ ಉಡುಪಿಯ ಹೋಟೇಲ್ ನೈವೇದ್ಯದ 'ಅನುಗ್ರಹ ಸಭಾಂಗಣ'ದಲ್ಲಿ ನಡೆಯಿತು.

## ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,

ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇದರ 12ನೇ ಸರ್ವಸದಸ್ಯರ ಮಹಾಸಭೆಯು ದಿನಾಂಕ : 14-09-2014 ರಂದು ಪದವು ವ್ಯವಸಾಯ ಸೇವಾ ಸಹಕಾರಿ ಸಂಘ(ಯಶಸ್ವಿ ಸೌಧ) ಕುಲಶೇಕರ, ಕೈಕಂಬ, ಮಂಗಳೂರು ಇಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರೆಲ್ಲರಿಂದ ದೀಪ ಬೆಳಗಿಸುವುದರೊಂದಿಗೆ ಪ್ರಾರಂಭವಾಯಿತು.



## ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ.,




ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಕೊಪ್ಪ ಇದರ 2013-14ನೇ ಸಾಲಿನ 10ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ : 14.09.2014 ರಂದು ಕೊಪ್ಪ ಮೇಲ್ಪಾಲ್ ರಸ್ತೆಯಲ್ಲಿರುವ ಶ್ರೀ ಫಾಲಚಂದ್ರ ಯಜ್ಞಕ್ಷೇತ್ರದ ಭಾರತೀತೀರ್ಥ ಸಭಾ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಎಸ್.ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

## ಶ್ರೀ ಜಿ.ಎಸ್. ಟೋಪಣ್ಣನವರ ವಿದೇಶ ಪ್ರಯಾಣ



ಬೆಳಗಾವಿ ವಿಭಾಗದ ರಿಜನಲ್ ಮ್ಯಾನೇಜರ್‌ರಾದ ಶ್ರೀ ಜಿ.ಎಸ್. ಟೋಪಣ್ಣವರ್‌ರವರು ವೈಯಕ್ತಿಕ ವಿದೇಶ ಪ್ರಯಾಣ ಸಂದರ್ಭದಲ್ಲಿ ಅವರಿಗೆ ಬೆಳಗಾವಿ ವಿಭಾಗದ ಸಿಬ್ಬಂದಿವರ್ಗದವರು ಅವರಿಗೆ ಶುಭಕೋರಿದರು

## ಸಂಯುಕ್ತ ಸಹಕಾರಿಗೆ ನಾಮ ನಿರ್ದೇಶನ



ಶ್ರೀ ಜಿ.ಎನ್. ಪಾಟೀಲ



ಶ್ರೀ ಎಸ್. ನಾಗರಾಜು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಖಾಲಿ ಇದ್ದ ನಿರ್ದೇಶಕರ ಸ್ಥಾನಗಳಿಗೆ ಬಾಗಲಕೋಟೆ ಜಿಲ್ಲೆಯಿಂದ ಶ್ರೀ ಜಿ.ಎನ್. ಪಾಟೀಲ ಉಪಾಧ್ಯಕ್ಷರು, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ನವನಗರ, ಬಾಗಲಕೋಟ ಹಾಗೂ ಮಂಡ್ಯ ಜಿಲ್ಲೆಯಿಂದ ಶ್ರೀ ಎಸ್. ನಾಗರಾಜು ಅಧ್ಯಕ್ಷರು, ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ, ಇವರುಗಳು ಪ್ರತಿನಿಧಿಯಾಗಿ ನಾಮ ನಿರ್ದೇಶನಗೊಂಡಿರುತ್ತಾರೆ.

## ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,



2013–14ನೇ ಸಾಲಿನ 16ನೇ ವಾರ್ಷಿಕ ಸರ್ವ ಸದಸ್ಯರಮಹಾ ಸಭೆಯು ದಿನಾಂಕ : 10–08–2014 ರಂದು ಬೆಂಗಳೂರಿನ ಕೋರಮಂಗಲದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವರೆಡ್ಡಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು.

ಬ್ಯಾಂಕು ಎಲ್ಲಾ ಕ್ಷೇತ್ರಗಳಲ್ಲಿಯೂ ಗಣನೀಯ ಪ್ರಗತಿ ಸಾಧಿಸಿದ್ದು 2013–14ನೇ ಸಾಲಿಗೆ ಒಟ್ಟು ರೂ.172.00 ಲಕ್ಷಗಳ ನಿವ್ವಳ ಲಾಭ ಗಳಿಸಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ 15% ಡಿವಿಡೆಂಡ್ ನೀಡಲಾಗುವುದೆಂದು ಬ್ಯಾಂಕಿನ ಅಧ್ಯಕ್ಷರು ತಿಳಿಸಿದರು. ಬ್ಯಾಂಕಿನ ಒಟ್ಟು ಠೇವಣಾತಿಗಳು 100 ಕೋಟಿಗಳನ್ನು ದಾಟಿದ್ದು, ಬ್ಯಾಂಕಿನ ನಿವ್ವಳ ನಿಷ್ಕ್ರಿಯ ಆಸ್ತಿಗಳು ಸತತ 3 ವರ್ಷಗಳಿಂದ 0% ಆಗಿ ಗಣನೀಯ ಸಾಧನೆ ಮಾಡಿದೆ.

ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವಿತರಿಸಿ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಬ್ಯಾಂಕಿನ ಸದಸ್ಯರಿಗೆ ಸನ್ಮಾನಿಸಲಾಯಿತು.

## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,



ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., 70ನೇ ವಾರ್ಷಿಕ ಸರ್ವ ಸದಸ್ಯರ ಸಭೆ
ಸದರಿ ಸಹಕಾರಿಯು 2013–14 ಸಾಲಿನಲ್ಲಿ 155.84 ಲಕ್ಷ ಲಾಭ ಗಳಿಸಿದೆ.

## ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಣೆ ಕಾರ್ಯಕ್ರಮ



ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಸಹಕಾರಿಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಶಾಲೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಣೆಯ ಕಾರ್ಯಕ್ರಮವನ್ನು ದಿನಾಂಕ : 24–08–2014ರಂದು, ಅನ್ನಪೂರ್ಣ, ನವಮಂತ್ರಾಲಯ ಮಂದಿರ, ಬಸವನಗುಡಿ ರಸ್ತೆ, ಬೆಂಗಳೂರು ಇಲ್ಲಿ ನಡೆಸಲಾಯಿತು.

**ಸ್ಥಳಾಭಾವದ ಕಾರಣದಿಂದ ಇನ್ನೂ ಹಲವಾರು ಸಹಕಾರಿಗಳ ವಾರ್ಷಿಕ ವರದಿ, ಛಾಯಾ ಚಿತ್ರಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. –ಸಂ.**

# ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅಂತರರಾಜ್ಯ ಯಶಸ್ವಿ ಅಧ್ಯಯನ ಪ್ರವಾಸ

ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಹಾಗೂ ಅಧಿಕಾರಿಗಳಿಗಾಗಿ ದಿನಾಂಕ : 13–9–2014 ರಿಂದ 22–9–2014 ರವರೆಗೆ ಹಮ್ಮಿಕೊಳ್ಳಲಾಗಿದ್ದ ಪ್ರಥಮ ಅಂತರರಾಜ್ಯ ಸಹಕಾರಿ ಅಧ್ಯಯನ ಪ್ರವಾಸ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಯಿತು. ನಮ್ಮ ರಾಜ್ಯದ ಸಹಕಾರಿ ಸಂಸ್ಥೆಗಳ ಅಧ್ಯಯನವು ಸೇರಿದಂತೆ ನೆರೆ ರಾಜ್ಯಗಳಾದ ಗೋವಾ, ಮಹಾರಾಷ್ಟ್ರ, ಗುಜರಾತ ರಾಜ್ಯಗಳ ಉತ್ತಮ ಸಹಕಾರಿ ಸಂಸ್ಥೆಗಳ ಅಧ್ಯಯನ, ಜನರ ನಡೆನುಡಿಗಳು ಆಚಾರ ವಿಚಾರಗಳು ಪ್ರೇಕ್ಷಣೀಯ ಸ್ಥಳಗಳು, ಪ್ರವಾಸಿ ತಾಣಗಳು, ಯಾತ್ರಾ ಸ್ಥಳಗಳಿಗೆ ಭೇಟಿನೀಡುವ ಅವಕಾಶ ಈ ತಂಡದ್ದಾಗಿತ್ತು.

| | | |
|---|---|---|
| ಒಟ್ಟು ಪ್ರವಾಸದ ದೂರ | : | 3750 ಕಿ.ಮಿ. |
| ಪ್ರವಾಸದ ದಿನಗಳು | : | 10 ದಿನ |
| ಭಾಗವಹಿಸಿದ ಜಿಲ್ಲೆಗಳು | : | 9 |
| ಭಾಗವಹಿಸಿದ ಸೌಹಾರ್ದ ಸಹಕಾರಿಗಳು (ಸಂಯುಕ್ತ ಸಹಕಾರಿಯು ಸೇರಿದಂತೆ) | : | 17 |
| ಭಾಗವಹಿಸಿದ ಪ್ರತಿನಿಧಿಗಳು (ಪುರುಷರು – 28 ಮಹಿಳೆಯರು – 6) | : | 34 |
| ಪ್ರವಾಸ ಮಾಡಿದ ಸ್ಥಳಗಳು | : | 11 |

ಎಕ್ಸಾಂಬ – ಬೋರಗಾಂವ (ಕರ್ನಾಟಕ) – ಕೊಲ್ಲಾಪುರ – ವಾರ್ಣಾನಗರ – ಪುಣೆ – ನಾಶಿಕ (ಮಹಾರಾಷ್ಟ್ರ) – ಅಹ್ಮದಾಬಾದ – ಗಾಂಧಿನಗರ – ಆನಂದ (ಗುಜರಾತ) ಮುಂಬೈ (ಮಹಾರಾಷ್ಟ್ರ) – ಗೋವಾ (ಗೋವಾ) 4 ರಾಜ್ಯಗಳು.



ಶ್ರೀ ಬೀರೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಎಕ್ಸಾಂಬ ಇದರ ಸ್ಥಾಪಕ ಅಧ್ಯಕ್ಷ ಶ್ರೀ ಅಣ್ಣಾಸಾಹೇಬ ಶಂಕರ ಜೊಲ್ಲೆ, ಶಾಸಕಿ ಶ್ರೀಮತಿ ಶಶಿಕಲಾ ಜೊಲ್ಲೆ, ಹಾಲಿ ಅಧ್ಯಕ್ಷ ಶ್ರೀ ಜಯಾನಂದ ಜಾದವ್ ಅವರೊಂದಿಗೆ.

## ಭೇಟಿ ನೀಡಿ ಅಧ್ಯಯನ ಮಾಡಿದ ಸಹಕಾರ ಸಂಸ್ಥೆಗಳು – 15

1. ಶ್ರೀ ಬೀರೇಶ್ವರ ಸೌಹಾದ್ ಕ್ರೆಡಿಟ್ ಸಹಕಾರಿ ನಿ., ಎಕ್ಸಾಂಬ.
2. ಸಹಕಾರ ಎಜ್ಯುಕೇಷನ್ ಮತ್ತು ಸಾಮಾಜಿಕ ಅಬಿವೃದ್ಧಿ ಸಂಘ, ಎಕ್ಸಾಂಬ.
3. ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ ನಿ., ಎಕ್ಸಾಂಬ.
4. ಶ್ರೀ ಜ್ಯೋತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಎಕ್ಸಾಂಬ.
5. ಬೋರಗಾಂವ ಕೃಷಿ ಪತ್ತಿನ ಸಹಕಾರ ಸಂಘ ನಿ., ಬೋರಗಾಂವ.
6. ಬೋರಗಾಂವ ಹಾಲು ಉತ್ಪಾದಕರ ಸಹಕಾರ ಸಂಘ ನಿ.,
7. ದಿ ಅರಿಹಂತ ಸೌಹಾರ್ದ ಕ್ರೆಡಿಟ್ಸಹಕಾರ ಸಂಘ ನಿ., ಬೋರಗಾಂವ.
8. ಶೇತ್ಕರಿ ಬಝಾರ, ವಾರಣಾನಗರ, ಕೊಲ್ಲಾಪೂರ.
9. ವೈಕುಂಠ ಮೆಹತಾ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ ಪೂನಾ.
10. ಕಾಸ್ಮೊಸ್ ಬ್ಯಾಕ್ ನಿ., ಪೂನಾ.
11. ಬುಲ್ಡಾನಾ ಪೂನಾ ಶಾಖೆ.
12. ಅಹಮದಾಬಾದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಅಹಮದಾಬಾದ.
13. ಅಮೂಲ್, ಆನಂದ.
14. ಸಾರಸ್ವತ ಕೋ–ಆಪರೇಟಿವ್ ಬ್ಯಾಂಕ್, ಮುಂಬೈ.
15. ಗೋವಾ ರಾಜ್ಯ ಸಹಕಾರಿ ಅಪೇಕ್ಸ ಬ್ಯಾಂಕ್ ನಿ., ಗೋವಾ.



ಮುಂಬೈನ ಸಾರಸ್ವತ ಕೋ–ಆಪರೇಟಿವ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರೊಂದಿಗೆ

**ಭೇಟಿ ಮಾಡಿದ ಸಹಕಾರ ಕ್ಷೇತ್ರಗಳು :** ಸಹಕಾರಿ ಬ್ಯಾಂಕಿಂಗ್ ಕ್ಷೇತ್ರ, ಕ್ರೆಡಿಟ್ ಸಹಕಾರ ಸಂಸ್ಥೆಗಳು, ವ್ಯವಸಾಯ ಸಹಕಾರ ಕ್ಷೇತ್ರ, ಗ್ರಾಹಕ ಕ್ಷೇತ್ರ, ಮಾರಾಟ ಕ್ಷೇತ್ರ, ಹಾಲು ಉತ್ಪಾದಕರ ಕ್ಷೇತ್ರ, ಸಹಕಾರ ಸಂಸ್ಕರಣಾ ಕ್ಷೇತ್ರ, ಎಣ್ಣೆ ಬೀಜ ಬೆಳೆಗಾರರ ಸಹಕಾರ ಕ್ಷೇತ್ರ, ಸಹಕಾರ ಶಿಕ್ಷಣ ಕ್ಷೇತ್ರ, ಮಹಿಳಾ ಸಹಕಾರಿ ಕ್ಷೇತ್ರ ಮತ್ತು ಭೇಟಿ ನೀಡಿ ಅಧ್ಯಯನ ಮಾಡಿದ ಇತರೆ ಅಧ್ಯಯನ ಯೋಗ್ಯ ಸಂಸ್ಥೆಗಳು – 3

1. ಶ್ರೀ ಬಿ.ಕೆ.ಎಸ್.ಅಯ್ಯಂಗಾರ ಯೋಗಶಾಲಾ ಪೂನಾ.
2. ಸೇವಾ ಮಹಿಳಾ ಸಂಘಟನೆ ಅಹಮದಾಬಾದ್.
3. ಸಾಬರಮತಿ ಗಾಂಧಿ ಆಶ್ರಮ ಅಹಮದಾಬಾದ್.

**ಅಧ್ಯಯನ ಮಾಡಿದ ವಿಷಯಗಳು :** ಸಂಸ್ಥೆಗಳ ಸಾಧನೆಗಳು, ಸಾಧನೆಗಳಿಗೆ ಸಹಕರಿಸಿದ ಸಹಕಾರಿ ಗಣ್ಯರು ಸಂಸ್ಥೆಗಳ ಕಾರ್ಯಗಳು. ವೈಶಿಷ್ಠಗಳು. ನಿರ್ದೇಶಕರ ಹಾಗೂ ಸಿಬ್ಬಂದಿಯವರುಗಳ ಹಾಗೂ ಸದಸ್ಯರುಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ ನಿರ್ವಹಣೆ



ಪೂನಾ ವೈಕುಂಠ ಮೆಹತಾ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರೊಂದಿಗೆ

ಮತ್ತು ಆಂತರಿಕ ಸಂಬಂಧಗಳ ನಿರ್ವಹಣೆ. ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸರಕಾರದ ಪಾತ್ರ. ಭೇಟಿ ನೀಡಿದ ಯಾತ್ರಾ ಸ್ಥಳಗಳು – 12 ಪ್ರೇಕ್ಷಣೀಯ ಸ್ಥಳಗಳು – 12



ಗೋವಾ ರಾಜ್ಯ ಸಹಕಾರಿ ಅಪೇಕ್ಸ್ ಬ್ಯಾಂಕ್ ನಿ., ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರೊಂದಿಗೆ



ಪೂನಾದ ಕಾಸ್ಮೊಸ್ ಬ್ಯಾಂಕಿನ ತರಬೇತಿ ಅಧಿಕಾರಿಗಳೊಂದಿಗೆ



ದಿ ಅರಿಹಂತ ಸೌಹಾರ್ದ ಕ್ರೆಡಿಟ್ ಸಹಕಾರ ಸಂಘ ನಿ., ಬೋರಗಾಂವ ಅಧ್ಯಕ್ಷರಾದ ಶ್ರೀ ರಾವ್ ಸಾಹೇಬ ಪಾಟೀಲರೊಂದಿಗೆ

# ಸ್ಫೂರ್ತಿ ನೀಡಿದ ಹಿತಕರ ಪ್ರವಾಸ

## ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳ ಅಂತರರಾಜ್ಯ ಅಧ್ಯಯನ ಪ್ರವಾಸ

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳ ಅಂತರರಾಜ್ಯ ಅಧ್ಯಯನ ಪ್ರವಾಸದ ಮೊದಲ ತಂಡವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಸಹಕಾರಿ ಧ್ವಜವನ್ನು ಹಾರಿಸುವುದರ ಮೂಲಕ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಶ್ರೀ ಶರಣಗೌಡ ಜಿ. ಪಾಟೀಲ ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ ಉಪಸ್ಥಿತರಿದ್ದರು.




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿ ಸಂಘಗಳ ಮಾರ್ಗದರ್ಶಕ ಸಂಸ್ಥೆಯಾಗಿ ಎಲ್ಲರ ಆದರಾಭಿಮಾನಕ್ಕೆ ಪಾತ್ರವಾಗಿದೆ. ಪ್ರಸಕ್ತ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಮತ್ತವರ ಎಲ್ಲ ಸದಸ್ಯರ ಒಂದು ಕನಸು, ನಮ್ಮ ಸೌಹಾರ್ದ ಸಹಕಾರಿಗಳನ್ನು ಹೊರ ರಾಜ್ಯಗಳಿಗೆ ಕರೆದೊಯ್ದು ಅಲ್ಲಿನ ಸಹಕಾರ ಸಂಘಗಳ ಅಭಿವೃದ್ಧಿ ಮತ್ತು ಬೆಳವಣಿಗೆಯನ್ನು ಪರಿಚಯಿಸಬೇಕೆಂಬುದು. ಇದರಿಂದ ಸ್ಫೂರ್ತಿಗೊಂಡು ನಮ್ಮ ರಾಜ್ಯದಲ್ಲಿಯೂ ಹಲವಾರು ಉತ್ತಮ ಕಾರ್ಯಗಳು ನಡೆದು ಸಹಕಾರಿ ಚಳುವಳಿ ಎತ್ತರೆತ್ತರಕ್ಕೆ ಬೆಳೆಯಲಿ ಎಂಬ ಪರಿಕಲ್ಪನೆ ನಿಜಕ್ಕೂ ಮೆಚ್ಚತಕ್ಕದ್ದು. ಈ ನಿಟ್ಟಿನಲ್ಲಿ ಕರ್ನಾಟಕದ ಸಹಕಾರಿ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಅಂತರ ರಾಜ್ಯ ಪ್ರವಾಸವನ್ನು ದಿನಾಂಕ : 13.09.2014 ರಿಂದ 22.09.2014 ರವರೆಗೆ ಏರ್ಪಡಿಸಲಾಗಿತ್ತು. ಕರ್ನಾಟಕದ ಕೆಲವು ಸಹಕಾರಿಗಳೂ ಸೇರಿದಂತೆ, ಮಹಾರಾಷ್ಟ್ರ, ಗುಜರಾತ್ ಮತ್ತು ಗೋವಾ ರಾಜ್ಯಗಳ ಪ್ರವಾಸ ಅತ್ಯಂತ ಉಪಯುಕ್ತವಾಗಿಯೂ, ಫಲಪ್ರದವಾಗಿಯೂ ಇತ್ತು.

ಈ ಪ್ರವಾಸದಲ್ಲಿ ರಾಜ್ಯದ ಒಂಭತ್ತು ಜಿಲ್ಲೆಯ, ಹದಿನೇಳು ಸಂಸ್ಥೆಗಳ 34 ಸದಸ್ಯರು ಪಾಲ್ಗೊಂಡಿದ್ದು ಒಂದು ವಿಶೇಷವಾಗಿತ್ತು. ಒಟ್ಟು 3750 ಕಿಲೋಮೀಟರ್ ದೂರದ ಪ್ರವಾಸವನ್ನು ಹತ್ತು ದಿನಗಳಲ್ಲಿ ಮುಗಿಸಿ, ಆಯ್ದ 16 ಸಹಕಾರ ಸಂಸ್ಥೆಗಳನ್ನು ಸಂದರ್ಶಿಸಿದ್ದು ಒಂದು ದಾಖಲೆಯೇ ಸರಿ. ಇದರ ಜೊತೆಗೆ 12 ಧಾರ್ಮಿಕ ಕ್ಷೇತ್ರಗಳು ಮತ್ತು 16 ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸುವ ಸೌಭಾಗ್ಯ ಪಾಲ್ಗೊಂಡಿದ್ದ ಎಲ್ಲ ಸದಸ್ಯರಿಗೆ ದೊರೆಯಿತು.

13.09.2014ರಂದು ಬೆಂಗಳೂರಿನ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಿಂದ, ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಅವರ ಶುಭ ಹಾರೈಕೆಯಿಂದ ಹೊರಟ ಹವಾನಿಯಂತ್ರಿತ ವಾಹನ 14ರ ಬೆಳಗ್ಗೆ ಚುಮುಚುಮು ಮುಂಜಾನೆಯಲ್ಲಿ ನಿಂತಿದ್ದು ಬೆಳಗಾವಿ ಜಿಲ್ಲೆಯ ಎಕ್ಸಾಂಬಾದಲ್ಲಿ. ಅಲ್ಲಿನ ಬೀರೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರ ಆತಿಥ್ಯ ಎಲ್ಲರನ್ನು ಬೆರಗುಗೊಳಿಸಿತು. ಸಹಕಾರಿಯ ಅಧ್ಯಕ್ಷ ಶ್ರೀ ಅಣ್ಣಾ ಸಾಹೇಬ್ ಶಿವಶಂಕರ್ ಜೊಲ್ಲೆಯವರ ಪರಿಶ್ರಮದಿಂದ ರೂಪುಗೊಂಡ ಸಹಕಾರಿಯು 85 ಶಾಖೆಗಳನ್ನೂ, 74,352 ಸದಸ್ಯ ಬಲವನ್ನೂ, 627 ಕೋಟಿ ರೂ.ಗಳ ಠೇವಣಿಯ್ನೂ ಹೊಂದಿದ್ದು, ಐದು ಕೋಟಿಗೂ ಹೆಚ್ಚು ಲಾಭ ಗಳಿಸಿದೆ ಎಂದು ಕೇಳಿ ಅಚ್ಚರಿಯಾಯಿತು. ಅಲ್ಲದೆ ಜೊಲ್ಲೆಯವರು ಸ್ಥಾಪಿಸಿ ನಡೆಸುತ್ತಿರುವ ಪಬ್ಲಿಕ್ ಶಾಲೆ ಅತಿ ಸುಂದರ ವಾತಾವರಣದಲ್ಲಿ ಕಣ್ಮನ ಸೆಳೆಯುವಂತಿತ್ತು. ತಮ್ಮ ವಿಕಲಾಂಗ ಜೇಷ್ಠಪುತ್ರನ ಆಶಯದಂತೆ ಸ್ಥಾಪಿಸಿರುವ ಆಶಾಜ್ಯೋತಿ ಶಾಲೆಯಲ್ಲಿರುವ 90 ಮಕ್ಕಳಿಗೆ ಉಚಿತ ಊಟ, ಶಿಕ್ಷಣ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿಕೊಟ್ಟಿರುವುದು ನಿಜಕ್ಕೂ ಅಭಿನಂದನಾರ್ಹ.

ಅಲ್ಲಿಂದ ಮುಂದೆ ನಾವು ಸಾಗಿದ್ದು ಬೋರೆಗಾಂವ್‌ಗೆ. ಅಲ್ಲಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘವನ್ನು ವೀಕ್ಷಿಸಿ, ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಗೆ ಭೇಟಿ ನೀಡಿದೆವು. ಅಲ್ಲಿ ಸಂಸ್ಥಾಪಕ ಅಧ್ಯಕ್ಷರೂ, ಸಹಕಾರ ರತ್ನ ಮತ್ತು ಸಮಾಜರತ್ನ ಪುರಸ್ಕೃತರು ಆದ ರಾವಸಾಹೇಬ ಅ.ಪಾಟೀಲ ಅವರ ಆತಿಥ್ಯದಲ್ಲಿ ಭೋಜನ ಮುಗಿಸಿ ಸಹಕಾರಿಯ ಕುರಿತು ಮಾಹಿತಿ ಪಡೆದೆವು. 21 ಶಾಖಾ ಕಛೇರಿಗಳನ್ನು ಹೊಂದಿರುವ ಆ ಸಹಕಾರಿಯ ಅದ್ಭುತ ಸಾಧನೆ ಎಲ್ಲರ ಮೆಚ್ಚುಗೆಗೆ ಪಾತ್ರವಾದವು. ತನ್ನ 24 ವರ್ಷಗಳ ಹಾದಿಯಲ್ಲಿ 18.48 ಕೋಟಿ ರೂ. ಶೇರು ಬಂಡವಾಳವನ್ನು ಹೊಂದಿದ್ದು, ಅವುಗಳಲ್ಲಿ 11 ಶಾಖೆಗಳು ಸ್ವಂತ ಕಟ್ಟಡ ಹೊಂದಿವೆ. ಈ ವರ್ಷ ಈ ಸಹಕಾರಿಯು 1,62,89,660 ರೂ.ಗಳಷ್ಟು ಲಾಭಗಳಿಸಿ ಮುನ್ನಡೆಯುತ್ತಿದೆ. ಅಲ್ಲಿ ಹಲವಾರು ಸುರಕ್ಷಿತ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿ,

ಸಾರ್ವಜನಿಕರಿಗೆ ಕೇವಲ ಎರಡು ರೂ.ಗಳಲ್ಲಿ 10ಲೀ. ಕುಡಿಯುವ ನೀರನ್ನು ಒದಗಿಸುತ್ತಿದೆ.

ದಿನಾಂಕ 14.09.2014 ರಂದು ಕೊಲ್ಲಾಪುರಕ್ಕೆ ಭೇಟಿ ನೀಡಿದ ನಮ್ಮ ತಂಡ ವರ್ಣಾ ವಿಭಾಗ್ ಸಹಕಾರಿ ಘಟಕ ಮಂಡಲ್‌ನ್ನು ಸಂದರ್ಶಿಸಿದೆವು. ಅಲ್ಲದೆ ಅಲ್ಲಿನ ಶೇತ್ಕರಿ ಬಜಾರ್‌ಗೂ ಭೇಟಿ ನೀಡಿದ್ದೆವು. ಸಹಕಾರಿಯ ಪ್ರಗತಿಯ ಪರಿಚಯ ಮಾಡಿಕೊಡುವ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದೆವು. ಅಲ್ಲಿಂದ ನಾವು ಅಲ್ಲಿನ ಹೋಟೆಲ್ ಆನಂದ್ ಮಲ್ಹಾರ್‌ನಲ್ಲಿ ಉಳಿದೆವು. ಅಂದು ಸಂಜೆ ಪ್ರಖ್ಯಾತ ಮಹಾಲಕ್ಷ್ಮಿ ದೇವಾಲಯಕ್ಕೆ ಭೇಟಿ ನೀಡಿದೆವು. ಅಲ್ಲಿನ ಪ್ರಸಿದ್ಧ ಸಿದ್ಧಗಿರಿಯ ಕಾನೇರಿ ಮಠದ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ ಅಲ್ಲಿನ ಶಿವ ದೇವಾಲಯ ಮತ್ತು ಸುಂದರವಾದ ಕಲೆಯನ್ನು ನೋಡಿದೆವು ಮತ್ತು ಅಲ್ಲಿಯ ಹೋಟೆಲ್ ಒಂದರಲ್ಲಿ ಉಳಿದುಕೊಂಡೆವು.

15.09.2014ರಂದು ಪುಣೆಗೆ ಹೋಗುವ ದಾರಿಯಲ್ಲಿ ಜ್ಯೋತಿಬಾ ದೇವಾಲಯವನ್ನು ವೀಕ್ಷಿಸಿದೆವು. ಅಂದು ನಮ್ಮ ವಾಸ್ತವ್ಯ ಆಳಂದಿಯ ಸಂತ ಜ್ಞಾನೇಶ್ವರ ಅತಿಥಿಗೃಹದಲ್ಲಿ.

16.09.2014 ರಂದು ಆಳಂದಿಯಿಂದ ನಮ್ಮ ಪ್ರಯಾಣ ಪೂನಾದ 1947ರಲ್ಲಿ ಸ್ಥಾಪಿತವಾದ ವೈಕುಂಠ ಮೆಹ್ತಾ ಇನಸ್ಟಿಟ್ಯೂಟ್‌ಗೆ (VIMNICOM) ಭೇಟಿ ನೀಡಿ, ಅಲ್ಲಿ ದೊರೆಯುವ ತರಬೇತಿ, ಶಿಕ್ಷಣ ಮತ್ತು ದೊರೆಯುವ ಸವಲತ್ತುಗಳ ಬಗ್ಗೆ ವಿವರ ಪಡೆದೆವು. ಅಲ್ಲಿನ ನಿರ್ದೇಶಕರೊಡನೆ ಛಾಯಾ ಚಿತ್ರ ತೆಗಿಸಿಕೊಂಡೆವು. ಅಲ್ಲಿಂದ ನಮ್ಮ ಮುಂದಿನ ಭೇಟಿ ಕಾಸ್ಮೋಸ್ ಸಹಕಾರ ಬ್ಯಾಂಕ್‌ಗೆ. 1906ರಲ್ಲಿ ಸ್ಥಾಪನೆಯಾದ, ಏಳು ರಾಜ್ಯಗಳಲ್ಲಿ 134 ಶಾಖೆಗಳನ್ನು ಹೊಂದಿರುವ ಏಷ್ಯಾದ ಅತ್ಯಂತ ದೊಡ್ಡ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆ ಈ ಬ್ಯಾಂಕ್‌ಗಿದೆ. ಹದಿನಾಲ್ಕು ಕೋಟಿಗೂ ಮಿಗಿಲಾದ ಠೇವಣಿ, 84.31 ಕೋಟಿ ಲಾಭ ಗಳಿಸಿರುವ ಈ ಬ್ಯಾಂಕ್ ಸಾಧನೆ ನಮ್ಮೆಲ್ಲರಿಗೆ ಸ್ಫೂರ್ತಿ ನೀಡಿತು. ಕಾಸ್ಮಾಸ್‌ನ ಧ್ಯೇಯ ವಾಕ್ಯ ನಮ್ಮೆಲ್ಲರ ಮನ ಸೆಳೆಯಿತು. ಅದು ಹೀಗಿತ್ತು. “Maximising customer satisfaction through innovative services’. ಅದ ನಂತರ ನಾವು ಭೇಟಿನೀಡಿದ ತಾಣವೆಂದರೆ ಶನಿವಾರ್‌ವಾಡದ ಗಣೇಶ ದೇವಾಲಯ. ಅಲ್ಲಿಂದ ನಾವು ಶಿವಾಜಿ ಪಾರ್ಕ್, ಬಿಕೆ.ಎಸ್. ಅಯ್ಯಂಗಾರ್ ಅವರ ಯೋಗಕೇಂದ್ರ ಮತ್ತು ಪಾರ್ವತಿ ಬೆಟ್ಟವನ್ನು ನೋಡಿ ವಿಶ್ರಾಂತಿ ಪಡೆದೆವು.

17.09.2014 ರಂದು ಬೆಳಗ್ಗೆ ಸಂತ ಜ್ಞಾನೇಶ್ವರರ ಸಮಾಧಿ ಮಂದಿರವನ್ನು ನೋಡಿ ಪುಳಕಿತರಾದೆವು. ನಂತರ ಬುಲ್ಡಾನ ಅರ್ಬನ್ ಕೊ-ಆಪ್.ಸೊಸೈಟಿಯ ಪೂನಾ ಶಾಖೆಗೆ ತೆರಳಿದೆವು. ಅಲ್ಲಿ ಬುಲ್ಡಾನಾ ಸೊಸೈಟಿಯ ಸಾಧನೆಗಳನ್ನು ಕೇಳಿ, ಸಾಕ್ಷಚಿತ್ರ ನೋಡಿ ಮೂಕ ವಿಸ್ಮಿತರಾದೆವು. ಈ ಸಹಕಾರಿಯು 23 ಶಾಲೆಗಳು, 350 ಶಾಖೆಗಳು, 310 ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಿದ್ದೇ ಅಲ್ಲದೆ, 45 ಕಿ.ಮೀ.ಹೆದ್ದಾರಿಯನ್ನು ನಿರ್ಮಿಸಿ ದಾಖಲೆ ಸ್ಥಾಪಿಸಿದೆ. ದಾರಿಯಲ್ಲಿ ತ್ರ್ಯಂಬಕೇಶ್ವರಕ್ಕೆ ಹೋದೆವಾದರೂ, ವೇಳೆಯಾಗಿದ್ದರಿಂದ ಎಲ್ಲರಿಗೂ ದೇವರ ದರ್ಶನವಾಗಲಿಲ್ಲ.

18.09.2014ರಂದು ಗುಜರಾತಿನ ಅಹಮದಾಬಾದ್‌ಗೆ ಬಂದು ಸೇರಿದಾಗ ಬೆಳಗ್ಗೆ 8 ಗಂಟೆಯಾಗಿತ್ತು. ಹೋಟೆಲಿನಲ್ಲಿ ಸ್ನಾನ, ಉಪಹಾರ ಮುಗಿಸಿ, ಮೊದಲು ಭೇಟಿ ನೀಡಿದ ಮೊದಲ ತಾಣವೆಂದರೆ ‘ಸೇವಾ’ ಎಂಬ ಸರ್ಕಾರೇತರ ಸಂಸ್ಥೆಗೆ. ಅದೊಂದು ಮಹಿಳಾ ಸದಸ್ಯರಿಂದ ಕೂಡಿದ ಮತ್ತು ಹಲವಾರು ದೇಶಗಳಲ್ಲಿ ಶಾಖೆಗಳನ್ನು ಹೊಂದಿರುವ ಸಂಸ್ಥೆ. ಸಂಸ್ಥೆಯ ಮೂಲಕ ಮಹಿಳೆಯರಿಗಾಗಿ ಅನೇಕ ಸವಲತ್ತುಗಳನ್ನು ಕಲ್ಪಿಸಿಕೊಡಲಾಗಿದೆ. ನಂತರ ನಾವು ಅಹ್ಮದಾಬಾದ್ ಜಿಲ್ಲಾ ಸಹಕಾರ ಬ್ಯಾಂಕ್‌ಗೆ ಹೋದೆವು.

ಅಲ್ಲಿನ ಅಧಿಕಾರಿಗಳು ತುಂಬಾ ಚೆನ್ನಾಗಿ ನಮ್ಮನ್ನೆಲ್ಲ ಸ್ವಾಗತಿಸಿ, ತಮ್ಮ ಬ್ಯಾಂಕ್ ನಡೆದು ಬಂದ ಹಾದಿ, ಸಾಧನೆಗಳನ್ನು ವಿವರಿಸಿದರು. ಅಲ್ಲಿನ ಸ್ವಾಮಿನಾರಾಯಣ ದೇವಾಲಯ ‘ಅಕ್ಷರ ಧಾಮ’ ಎಲ್ಲರ ಆಸಕ್ತಿಯ ಮತ್ತು ಆಕರ್ಷಣೆಯ ಕೇಂದ್ರವಾಗಿತ್ತು. ದಿನಾಂಕ : 19.09.2014 ರಂದು ಬೆಳಗ್ಗೆ ಲೋಕಪ್ರಸಿದ್ಧವಾದ ಸಾಬರ್‌ಮತಿ ಆಶ್ರಮಕ್ಕೆ ಭೇಟಿ ನೀಡಿ ಮಹಾತ್ಮ ಗಾಂಧೀಜಿಯವರು ನಡೆದಾಡಿದ ಆ ಪವಿತ್ರ ತಾಣದಲ್ಲಿ ನಡೆದು ಪುಳಕಿತರಾದೆವು. ಸುಂದರ ಸಾಬರಮತಿ ನದಿಯ ದಡದಲ್ಲಿ ನಿರ್ಮಿಸಿದ ಈ ಆಶ್ರಮವನ್ನು ತುಂಬಾ ಚೆನ್ನಾಗಿ ಕಾಪಿಡಲಾಗಿದೆ. ಅಲ್ಲಿನ ಹೃದಯ ಕುಂಜ್,

## ಅಧ್ಯಯನ ಪ್ರವಾಸದ ಅನಿಸಿಕೆ

ಜ್ಞಾನಾರ್ಜನೆಗೆ ಆದ್ಯತೆ. ಸಹಕಾರಿ ಕ್ಷೇತ್ರದ ಮೂಲಕ ಏನೆಲ್ಲಾ ಸಾಧಿಸಬಹುದು ಎಂಬುದನ್ನು ಅಧ್ಯಯನಮಾಡಲು ಉತ್ತಮ ವ್ಯವಸ್ಥೆ. ದೇಶದ ಅತ್ಯುತ್ತಮ ಸಹಕಾರಿ ಸಂಸ್ಥೆಗಳಿಗೆ ಭೇಟಿಯ ಜೊತೆಗೆ ಪ್ರವಾಸಿ ಸ್ಥಳಗಳಿಗೆ ಹಾಗೂ ಯಾತ್ರಾ ಸ್ಥಳಗಳಿಗೂ ಭೇಟಿ. ಊಟ ಉಪಾಹಾರ ವಸತಿಗಳ ಉತ್ತಮ ವ್ಯವಸ್ಥೆ, ಸೌಹಾರ್ದಯುತ ವಾತಾವರಣದಲ್ಲಿ ಶಿಸ್ತು ಹಾಗೂ ವ್ಯವಸ್ಥಿತ ಪ್ರವಾಸ. ಇಂತಹ ಪ್ರವಾಸಗಳು ಸಹಕಾರಿಗಳ ಜ್ಞಾನದ ಮಟ್ಟ ಹಾಗೂ ಕ್ರೀಯಾಶೀಲತೆಯನ್ನು ಹೆಚ್ಚಿಸಲು ಪೂರಕ. ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದಕ್ಕಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರಿಗೆ ಧನ್ಯವಾದಗಳು.

– **ಕೆ.ವಿ.ಶ್ರೀನಿವಾಸ,** ಅಧ್ಯಕ್ಷರು,
ಶ್ರೀ ವಾಸವಿ ಪತ್ತಿನ ಸೌಹಾರ್ದ ಸಹಕಾರಿ ನಿ.,
ರಾಣೆಬೆನ್ನೂರು.

ವಿನೋಬಾ ಕುಟೀರ ಮತ್ತು ವಸ್ತುಪ್ರದರ್ಶನ ಎಲ್ಲರ ಗಮನ ಸೆಳೆಯಿತು. ನಂತರ ನಾವು ಆನಂದ್‌ಗೆ ತೆರಳಿ ಅಲ್ಲಿನ ಹಾಲು ಉತ್ಪಾದಕರ ಒಕ್ಕೂಟಕ್ಕೆ ಭೇಟಿ ನೀಡಿ ವರ್ಗೀಸ್ ಕುರಿಯನ್ ಅವರ ಸಾಧನೆಗಳ ಪರಿಚಯ ಮಾಡಿಕೊಂಡೆವು. ಅಲ್ಲಿಂದ ಮುಂದೆ ನಾವು ಮುಂಬೈಗೆ ತೆರಳಿದೆವು. ದಿನಾಂಕ : 20.09.2014 ರಂದು ಮುಂಬೈಗೆ ಬಂದು ಅಲ್ಲಿನ ಪ್ರಸಿದ್ಧ ಸಾರಸ್ವತ ಬ್ಯಾಂಕ್ ಗೆ ಭೇಟಿ ನೀಡಿದೆವು. ಅವರು ಷೇರುದಾರರಿಗೆ ಮತ್ತು ಬ್ಯಾಂಕ್ ಗ್ರಾಹಕರಿಗೆ ನೀಡುತ್ತಿರುವ ಸವಲತ್ತುಗಳನ್ನು ಕುರಿತು ವಿಚಾರ ವಿನಿಮಯ ಮಾಡಿಕೊಂಡೆವು. 267 ಶಾಖೆಗಳನ್ನು ಹೊಂದಿರುವ ಈ ಬೃಹತ್ ಬ್ಯಾಂಕ್‌ನ ಪ್ರಸಕ್ತ ಸಾಲಿನ ನಿವ್ವಳ ಆದಾಯ 147.09 ಕೋಟಿ ರೂ.ಗಳು. 4351 ಜನರಿಗೆ ಇದು ಉದ್ಯೋಗ ನೀಡಿರುವುದು ಸಹ ಸಂತಸದಾಯಕ ವಿಷಯವಾಗಿದೆ. ನಂತರ ನಾವು ಮುಂಬೈ ದರ್ಶನದಲ್ಲಿ ಗೇಟ್ ವೇ ಆಫ್ ಇಂಡಿಯಾ, ಚಿನ್ನದ ಗಣಪತಿ ದೇವಾಲಯ ಮತ್ತು ಪುರಾತನ ಕೋಟೆಯನ್ನು ವೀಕ್ಷಿಸಿದೆವು, ಮತ್ತು ಸಮುದ್ರದಲ್ಲಿ ದೋಣಿವಿಹಾರ ನಡೆಸಿದೆವು.

21.09.2014ರಂದು ಗೋವಾಕ್ಕೆ ಬಂದಿಳಿದ ನಮ್ಮ ತಂಡ ಅಲ್ಲಿನ ಹೋಟೆಲ್ ಒಂದರಲ್ಲಿ ಅಲ್ಪ ಕಾಲದ ವಿಶ್ರಾಂತಿಯ ನಂತರ ಹೋಗಿದ್ದು ಗೋವಾ ಅಪೆಕ್ಸ್ ಬ್ಯಾಂಕಿಗೆ. ಅದನ್ನು ಗೋವಾ ರಾಜ್ಯ ಸಹಕಾರ ಸಂಘ ಎಂದೂ ಕರೆಯುತ್ತಾರೆ. ಅಲ್ಲಿನ ಅಧಿಕಾರಿಗಳು ಸಂಸ್ಥೆಯ ಸೂಕ್ಷ್ಮ ಪರಿಚಯ ಮಾಡಿಕೊಟ್ಟರು. ನಂತರ ನಾವು ಗೋವಾದ ಮಂಗೇಶ್ ದೇವಾಲಯ, ಸೈಂಟ್ ಕ್ಸೇವಿಯರ್ ಚರ್ಚ್ ವೀಕ್ಷಿಸಿ ಕರ್ನಾಟಕದತ್ತ ಪಯಣ ಬೆಳೆಸಿದೆವು.

**ಒಟ್ಟು ಅಭಿಪ್ರಾಯ :** ಸಂಯುಕ್ತ ಸಹಕಾರಿಯು ಪ್ರಥಮಬಾರಿಗೆ ಏರ್ಪಡಿಸಿದ್ದ ಈ ಪ್ರವಾಸ ತುಂಬಾ ಅಪ್ಯಾಯಮಾನವಾಗಿತ್ತು. ಸಾಧನೆ ತೋರಿದ ಸಹಕಾರಿ ಸಂಸ್ಥೆಗಳಿಂದ ಸ್ಫೂರ್ತಿ, ರಂಜನೆ ಮತ್ತು ಅಪರೂಪದ ಸ್ಥಳಗಳ ವೀಕ್ಷಣೆ ಎಲ್ಲರಿಗೂ ಹೊಸಹೊಸ ಅನುಭವ ನೀಡಿತು. ಪಾಲ್ಗೊಂಡಿದ್ದ ವಿವಿಧ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳು ಒಬ್ಬರಿಗೊಬ್ಬರು ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕೂ, ತಮ್ಮತಮ್ಮ ಸಾಧನೆಗಳನ್ನು ಹಂಚಿಕೊಳ್ಳುವುದಕ್ಕೂ ಒಂದು ವೇದಿಕೆ ಕಲ್ಪಿಸಿದ್ದು ಅಭಿನಂದನಾರ್ಹ. ಇಂತಹ ಪ್ರವಾಸಗಳನ್ನು ಆಗಾಗ್ಗೆ ಏರ್ಪಡಿಸುವುದರಿಂದ ಪರಸ್ಪರ ಪರಿಚಯ, ಸಾಧನೆಯ ಶಿಖರವೇರಿದ ಸಂಸ್ಥೆಗಳ ಶ್ರಮ ಮತ್ತು ಮನಸ್ಸಿಗೆ ಮುದನೀಡಿ ತಮ್ಮತಮ್ಮ ಸಹಕಾರಿಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ಖಂಡಿತಾ ನೆರವಾಗುತ್ತದೆ.

ಇಂತಹ ಅಪೂರ್ವ ಶೈಕ್ಷಣಿಕ ಪ್ರವಾಸ ಏರ್ಪಡಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಎಲ್ಲ ಆಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಅಧಿಕಾರವರ್ಗದವರಿಗೆ ನಮ್ಮ ಕೃತಜ್ಞತೆಗಳು. ಊಟ, ವಸತಿ, ವೈಯಕ್ತಿಕ ಗಮನ, ಮಾರ್ಗದರ್ಶನ ಎಲ್ಲವೂ ಲೋಪರಹಿತವಾಗಿದ್ದುದು ವಿಶೇಷ. ನಮ್ಮೊಡನೆ ಬೆರೆತು ಉಪಯುಕ್ತ ಸಲಹೆ, ಸೂಚನೆ ಮತ್ತು ಮಾರ್ಗದರ್ಶನ ಮಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ್ ಮತ್ತು ಶ್ರೀ ನಾಗೇಂದ್ರ ಗುಪ್ತ, ಅಧಿಕಾರಿಗಳಾದ ಶ್ರೀ ವಿ.ಜೆ.ಕಾರಕೂನ ಮತ್ತು ಶ್ರೀ ಆರ್. ರಘುನಂದನ ಅವರಿಗೆ ನಾವೆಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಸಾಲದು.

**– ಎಂ.ಎಸ್.ಸುಂದರ ರಾಜ್,**
ಅಂಕಣಕಾರರು ಕನ್ನಡ ಪ್ರಭ,
ಉಪಾಧ್ಯಕ್ಷರು, ಶ್ರೀ ರಾಮಾನುಜ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ.

ಎರಡನೇ ತಂಡದ ಅಧ್ಯಯನ ಪ್ರವಾಸವನ್ನು ನವೆಂಬರ್ ಕೊನೆಯ ವಾರದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಕೇಂದ್ರ ಕಚೇರಿಯನ್ನು ಸಂಪರ್ಕಿಸುವುದು.



ಬೆಂಗಳೂರಿನಲ್ಲಿ ಇ ಸ್ಟಾಂಪಿಂಗ್ ಎಸಿಸಿ ಕೇಂದ್ರಗಳ ಸಭೆಯನ್ನು ಅಧ್ಯಕ್ಷರಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ ಹಮ್ಮಿಕೊಳ್ಳಲಾಗಿತ್ತು. 49ಎಸಿಸಿ ಕೇಂದ್ರಗಳಿಂದ 48 ಪ್ರತಿನಿಧಿಗಳು ಭಾಗವಹಿಸಿದ್ದರು. ಇ-ಸ್ಟಾಂಪಿಂಗ್ ಕೇಂದ್ರಗಳ ಕಾರ್ಯನಿರ್ವಹಣೆಯಲ್ಲಿ ಆಗಬಹುದಾದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮಾರ್ಗದರ್ಶನ ನೀಡಲಾಯಿತು.

## ಇ–ಸ್ಟಾಂಪಿಂಗ್ ಕೇಂದ್ರಗಳ ಉದ್ಘಾಟನೆ



ಶ್ರೀ ಆದಿತ್ಯ ನಾರಾಯಣ ಪತ್ತಿನ ಸೌಹಾರ್ದ ಸಹಕಾರಿ ಸಿಂಧನೂರಿನಲ್ಲಿ ಇ–ಸ್ಟಾಂಪಿಂಗ್ ಸೇವಾ ಸೌಲಭ್ಯವನ್ನು ಆರಂಭಿಸಲಾಯಿತು.

## ಆಂತರಿಕ ಸಂಬಂಧವು ಕುಟುಂಬ ಹಾಗೂ ಸಹಕಾರ ಕ್ಷೇತ್ರಕ್ಕೂ ಅನಿವಾರ್ಯ – ಬಿ.ಎ.ಮಹದೇವಪ್ಪ

ಫೈನಾನ್ಸ್ ಕಾರ್ಪೋರೇಷನ್ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿ ಗ್ರಾಹಕರೊಂದಿಗೆ ಆಂತರಿಕ ಸಂಬಂಧಗಳು ಕಾಣೆಯಾಗುತ್ತಿರುವ ಇಂದಿನ ದಿನಗಳಲ್ಲಿ ಸಹಕಾರ ಸಂಘಗಳು ಸದಸ್ಯರ ಹಿತಾಸಕ್ತಿಗಳ ಬಗ್ಗೆ ಹಾಗೂ ಸೇವೆಗೆ ಒತ್ತು ನೀಡುತ್ತಿರುವುದನ್ನು ಕಾಣಬಹುದು. ಇಲ್ಲಿ ಸದಸ್ಯರೇ ಸಂಸ್ಥೆಯ ಮಾಲೀಕರು, ಇದಕ್ಕೆ ಮಾದರಿಯಾಗಿ ಮಯೂರ ಸೌಹಾರ್ದ ಸಹಕಾರಿ ಒಂದು ಉದಾಹರಣೆ ಎಂದು ಅಪೆಕ್ಸ್ ಬ್ಯಾಂಕಿನ ಮಾಜಿ ವ್ಯಸ್ಥಾಪಕರಾದ ಶ್ರೀ ಬಿ.ಎ.ಮಹದೇವಪ್ಪ ನವರು ನುಡಿದರು.

ನಗರದ ಮಥುರಾ ಪ್ಯಾರಡೈಸ್‌ನಲ್ಲಿ ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.,ನ ಶಿವಮೊಗ್ಗ ಶಾಖೆಯ ವಾರ್ಷಿಕ ಸಭೆಯಲ್ಲಿ "ಸಹಕಾರಿಯಲ್ಲಿ ಆಂತರಿಕ ಸಂಬಂಧಗಳು" ಎಂಬ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ್ ಜ್ಯಾಂತೀಕರ್‌ರವರು ವಿಶೇಷ ಅತಿಥಿಯಾಗಿ ಭಾಗವಹಿಸಿದ್ದರು. ರಾಜ್ಯದಲ್ಲಿ ಸುಮಾರು 3000 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿದ್ದು ಗ್ರಾಹಕರಿಗೆ ಹಿತವಾದ ಹಾಗೂ ಸಂಸ್ಥೆಗೆ




ಪೂರಕವಾದ ಬಡ್ಡಿದರದಲ್ಲಿ ವ್ಯವಹರಿಸುತ್ತಿವೆ ಎಂದರು.

ಮಯೂರ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಎಸ್.ವೆಂಕಟೇಶ್ ರವರು ತಾನು ಎಲ್ಲರಿಗಾಗಿ–ಎಲ್ಲರೂ ತನಗಾಗಿ ಎಂಬ ಸಹಕಾರದ ಮೂಲ ತತ್ವದ ಆಧಾರದ ಮೇಲೆ ಮಯೂರ ಸೌಹಾರ್ದ ಬೆಳೆದು ಬಂದಿದೆ ಎಂದರು. ಸಂಸ್ಕಾರ ಭಾರತಿ ತಂಡದಿಂದ ಪ್ರಾರ್ಥನೆ, ಶಾಖೆಯ ವ್ಯವಸ್ಥಾಪಕರಾದ ಮಂಜುನಾಥ್ ಎಸ್. ರವರು ಸ್ವಾಗತಿಸಿದರು. ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸಮೂರ್ತಿ ಇವರು ವರದಿ ನೀಡಿದರು, ಸಲಹಾ ಸಮಿತಿ ಸದಸ್ಯರಾದ ಎಂ.ಬಿ.ಸುರೇಶ್ ರವರು ವಂದಿಸಿದರು.

## ಸಂಯುಕ್ತ ಸಹಕಾರಿಯಿಂದ ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀ ಮಹೇಂದ್ರ ಜೈನ್ ಅವರ ಭೇಟಿ



ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತೀಕರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲರವರು ಸರಕಾರದ ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀ ಮಹೇಂದ್ರ ಜೈನ್ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ನೀಡಿದರು. ಸೌಹಾರ್ದ ಸಹಕಾರಿ ವ್ಯಾಜ್ಯಗಳ ಇತ್ಯರ್ಥಕ್ಕಾಗಿ ವಿಶೇಷ ನ್ಯಾಯಾಲಯಗಳನ್ನು ಮಂಜೂರು ಮಾಡಲು ವಿನಂತಿಸಲಾಯಿತು. ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ಕೆಲವು ತಿದ್ದುಪಡಿಗಳಿಂದಾಗಿ ಸೌಹಾರ್ದ ಸಹಕಾರಿಗಳ ದೈನಂದಿನ ಚಟುವಟಿಕೆಗಳಿಗೆ ತೊಂದರೆಯಾಗಿದೆ. ಈ ತಿದ್ದುಪಡಿಗಳು 97 ಸಂವಿಧಾನ ತಿದ್ದುಪಡಿಯ ಆಶಯಕ್ಕೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಪೂರಕವಾಗಿಲ್ಲ ಎಂದು ಮನವಿ ಮಾಡಿದರು.

## ಶ್ರೀ ವಿಠ್ಠಲ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ತುಮಕೂರು–ನೂತನ ಶಾಖೆಯ ಉದ್ಘಾಟನೆ

ಶ್ರೀ ವಿಠ್ಠಲ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ತುಮಕೂರು, ಈ ಸಹಕಾರಿಯ ನೂತನ ಶಾಖೆಯನ್ನು ಬೆಂಗಳೂರಿನಲ್ಲಿ ಗಾಂಧಿ ಬಜಾರ್‌ನಲ್ಲಿ ಪ್ರಾರಂಭಿಸಲಾಯಿತು. ಡಾ|| ಸಿ. ಸೋಮಶೇಖರ್, ಐಎಎಸ್, ನಿವೃತ್ತ ಕಾರ್ಯದರ್ಶಿಗಳು, ದೀಪ ಬೆಳಗಿಸಿ ಉದ್ಘಾಟಿಸಿದರು. ಸಮಾರಂಭದಲ್ಲಿ ಶ್ರೀ ಅಶೋಕ ಜೈನ್ ರಾಂಕ ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಮಹೇಶ್ ಹಾರ್ಡ್ ವೇರ್ ಅಂಡ್ ಪೈಪ್ಸ್ ಲಿ., ಬೆಂಗಳೂರು ಹಾಗೂ ಶ್ರೀ ಕೆ. ಪಾಂಡುರಂಗರಾವ್, ಕೆಎಎಸ್, ನಿವೃತ್ತ ಉಪವಿಭಾಗಾಧಿಕಾರಿಗಳು



ಬೆಂಗಳೂರು, ಸಹಕಾರಿಯ ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿ ಕಾಯ್ದೆ – 2014 ತಿದ್ದುಪಡಿ– ಅವಲೋಕನಾ ಸಭೆ

ಸೌಹಾರ್ದ ಸಹಕಾರಿ ಕಾನೂನಿನ ಇತ್ತೀಚಿನ ತಿದ್ದುಪಡಿಗಳು – ಸಾಧಕ ಬಾಧಕಗಳು ಕುರಿತು ದಿನಾಂಕ 19.09.2014 ರ ಮಧ್ಯಾಹ್ನ 2.30 ರಿಂದ ಸಹಕಾರ ಇಲಾಖಾಧಿಕಾರಿಗಳೊಂದಿಗೆ, ಹಿರಿಯ ಸಹಕಾರಿಗಳೊಂದಿಗೆ ಹಾಗೂ ರಾಜ್ಯದ ಆಯ್ದ ಸೌಹಾರ್ದ ಸಹಕಾರಿಗಳಿಂದ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಚರ್ಚಿಸಲಾಯಿತು. 26 ಜಿಲ್ಲೆಗಳಿಂದ 126 ಪ್ರತಿನಿಧಿಗಳು ಭಾಗವಹಿಸಿದ್ದರು.

## ಶ್ರೀ ಜಿ.ಟಿ.ದೇವೇಗೌಡರಿಗೆ ಅಭಿನಂದನೆ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು, ಮಾಜಿ ಸಹಕಾರ ಸಚಿವರು ಹಾಲಿ ಶಾಸಕರು ಆಗಿರುವ ಶ್ರೀ ಜಿ.ಟಿ.ದೇವೇಗೌಡರವರಿಗೆ ಜೀವಮಾನ ಸಾಧನೆಗಾಗಿ ಕ್ರೀಬ್ಕೋ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಮತ್ತು ಆಡಳಿತ ಮಂಡಳಿಯವರು ಶ್ರೀಯುತರನ್ನು ಅಭಿನಂದಿಸಿದ್ದಾರೆ.

## ಅಣ್ಣಾಸಾಹೇಬ್ ಜೊಲ್ಲೆಯವರಿಗೆ ಅಭಿನಂದನೆ



ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಎಕ್ಸಂಬ ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ, ಮಹಿಳಾ ಸೌಹಾರ್ದ ಸಹಕಾರಿ, ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಸ್ಥೆ ಮತ್ತು ಸಹಕಾರಿ ವಿದ್ಯಾಸಂಸ್ಥೆ ಮೂಲಕ ಹಲವಾರು ಶಾಲೆ ಮತ್ತು ಕಾಲೇಜುಗಳನ್ನು ಸ್ಥಾಪಿಸಿದ ಶ್ರೀ ಅಣ್ಣಾಸಾಹೇಬ್ ಶಂಕರ ಜೊಲ್ಲೆಯವರು ಕರ್ನಾಟಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ (ಕೆಓಎಫ್) ಆಯ್ಕೆಯಾಗಿರುವುದಕ್ಕೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ ಮತ್ತು ಆಡಳಿತ ಮಂಡಳಿ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

## ಸ್ವಚ್ಛಭಾರತ ಕಾರ್ಯಕ್ರಮದ ಅಂಗವಾಗಿ ಸಂಯುಕ್ತ ಸಹಕಾರಿಯ ಕಛೇರಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ



ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಸ್ವಚ್ಚತಾ ಅಭಿಯಾನದ ಅಂಗವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಹಾಗೂ ವಿಭಾಗಿಯ ಕಛೇರಿಗಳ ಸಿಬ್ಬಂದಿಗಳಿಂದ ದಿನಾಂಕ : 28–09–2014ರಂದು ಸ್ವಚ್ಚತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

## ಕೆ.ಎಂ.ಎಫ್. ಅಧ್ಯಕ್ಷರಾಗಿ ಶ್ರೀ ಪಿ. ನಾಗರಾಜ್

ಇತ್ತೀಚೆಗೆ ಹಾಲು ಮಹಾಮಂಡಳಿಯಲ್ಲಿ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಶ್ರೀ ಪಿ.ನಾಗರಾಜ್



ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀಯುತರು ಕರ್ನಾಟಕ ಹಾಲು ಮಹಾಮಂಡಳಕ್ಕೆ ಬಮೂಲ್ (ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ) ಜಿಲ್ಲಾ ಹಾಲು ಒಕ್ಕೂಟದಿಂದ ಪ್ರತಿನಿಧಿಸಿರುತ್ತಾರೆ. ಸಂಯುಕ್ತ ಸಹಕಾರಿಯ ಅಧ್ಯಕ್ಷ ರಾದ ಶ್ರೀ ಗುರುನಾಥ ಜಾಂತಿಕರ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಮತ್ತು ಆಡಳಿತ ಮಂಡಳಿಯವರು ಶ್ರೀಯುತರನ್ನು ಅಭಿನಂದಿಸಿದ್ದಾರೆ.



# ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆಯ ವ್ಯವಹಾರ; ಮಾನವ ಸಂಪನ್ಮೂಲ ಹಾಗೂ ಗ್ರಾಹಕರ ಸಂಬಂಧ ನಿರ್ವಹಣೆಯ ಪಾತ್ರ ಮತ್ತು ಮಹತ್ವ

– **ಡಾ|| ನಂದೀಶ ವಿ. ಹಿರೇಮಠ,** ಹಿರಿಯ ಬೋಧಕರು, ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ತರಬೇತಿ ಸಂಸ್ಥೆ (ಎನ್.ಐ.ಆರ್.ಬಿ) ಬೆಂಗಳೂರು.

...ಹಿಂದಿನ ಸಂಚಿಕೆಯಿಂದ

- ಕಾಲಕಾಲಕ್ಕೆ ವಿಶ್ಲೇಷಣೆ ಮಾಡಿ, ಮರು ಹೂಡಿಕೆ ಮಾಡುತ್ತಿದ್ದರೆ, ಬಂಡವಾಳ ಹೂಡಿಕೆಯಿಂದ ಬರುವ ಲಾಭಂಶವನ್ನು ಹೆಚ್ಚಿಸಬಹುದು. ಅದನ್ನೆ ತಜ್ಞರು 3R Policy (Review-Revice – Reinvest) ಎಂದು ಹೇಳುತ್ತಾರೆ.
- ಪ್ರಧಾನ ಕಛೇರಿ ಹಾಗೂ ಬ್ರಾಂಚ್‌ಗಳ ಮಧ್ಯ ಹಣದ ಚಲಾವಣೆ (Physical Cash Movement)ಯನ್ನು ಕಡಿಮೆಯಿಟ್ಟು, ಬ್ರಾಂಚುಗಳಲ್ಲಿ ಪರಸ್ಪರ ಹೊಂದಾಣಿಕೆ ಮಾಡಿದರೆ ಖರ್ಚು ಕಡಿಮೆ ಹಾಗೂ ತೊಂದರೆಗಳೂ ಕನಿಷ್ಟ, ಆದರೆ ಎಲ್ಲ ಮಾಹಿತಿ ಪ್ರಧಾನ ಕಛೇರಿಗೆ ಗೊತ್ತಿರಬೇಕು.
- ಬಂಡವಾಳ ಹೂಡಿಕೆ ನಿರ್ವಹಣೆ ಮಾಡುವ ಅಧಿಕಾರಿಗಳಿಗೆ ನಿರ್ಧಿಷ್ಟ ಅಧಿಕಾರದ ಹಸ್ತಾಂತರ (Specific Powersoft Detegation) ನೀಡಿದರೆ ಹೆಚ್ಚಿನ ಲಾಭಾಂಶ ಗಳಿಸಬಹುದು.

ಈ ಮೇಲ್ಕಾಣಿಸಿದ ಯೋಚನೆ – ಯೋಜನೆಗಳನ್ನು ಅಭಿವೃದ್ಧಿಪರ – ನಿರ್ವಹಣಾ ಕೌಶಲ್ಯಗಳನ್ನು ಅಳವಡಿಸಿಕೊಂಡು ಆಡಳಿತ ನಿರ್ವಹಿಸಿದರೆ ವೃತ್ತಿಪರ ವ್ಯವಹಾರ ನಿಭಾಯಿಸುವುದು ಕಷ್ಟಕರ ಕೆಲಸವಾಗಲಿಕ್ಕಿಲ್ಲ.

**3. ವೃತಿಪರ ಮಾನವ ಸಂಪನ್ಮೂಲ ನಿರ್ವಹಣೆ (Professional Human Resource Management) :**

ಸಂಸ್ಥೆಗಳಲ್ಲಿ ಲಭ್ಯವಿರುವ ಎಲ್ಲ ಸಂಪನ್ಮೂಲಗಳಲ್ಲಿ ಮಾನವ ಸಂಪನ್ಮೂಲ ಅತಿ ಪ್ರಾಮುಖ್ಯವಾದದ್ದು ಮತ್ತು ಅದನ್ನು ಬೇರೆ ಯಾವ ಸಂಪನ್ಮೂಲವು ಸೂಕ್ತವಾಗಿ ಭರಿಸಲಾಗುವುದಿಲ್ಲ.

**ನಿರ್ವಹಣೆ (Management)ಯಲ್ಲಿ 7 ಮೂಲ ಸಂಪನ್ಮೂಲಗಳಿವೆ :** 1. Men (ಮಾನವರು), 2. Materials (ವಸ್ತುಗಳು), 3. Machines (ಯಂತ್ರಗಳು), 4. Methods (ಪದ್ಧತಿಗಳು), 5. Money (ಹಣ), 6. Markets (ಮಾರು ಕಟ್ಟೆಗಳು), 7. Minutes (ಸಮಯ). ಈ ಏಳು ಸಂಪನ್ಮೂಲಗಳಲ್ಲಿ ನಂತರದ 6 ಸಂಪನ್ಮೂಲಗಳನ್ನು ಮಾನವ ಸಂಪನ್ಮೂಲ ನಿಭಾಯಿಸುತ್ತದೆ. ಅಂದರೆ ಅದರ ಮಹತ್ವ ವಿಶೇಷ. ಮಾನವ ಸಂಪನ್ಮೂಲದ ಬೆಲೆ ಹೆಚ್ಚುತ್ತಾ ಹೋಗುತ್ತದೆ (Appreciating Asset) ಆದರೆ ಇತರ ಸಂಪನ್ಮೂಲಗಳ ಬೆಲೆ ಇಳಿಮುಖವಾಗುತ್ತಾ ಹೋಗುತ್ತದೆ (Depreciting Asset). ಇವನ್ನೆಲ್ಲ ಗಮನಿಸಿದಾಗ ಸಂಸ್ಥೆಗಳಲ್ಲಿ ಮಾನವ ಸಂಪನ್ಮೂಲದ ನಿರ್ವಹಣೆಯ ಪಾತ್ರ ನಮಗೆ ತಿಳಿಯುತ್ತದೆ.

ವೃತ್ತಿಪರ ಮಾನವ ಸಂಪನ್ಮೂಲ ನಿರ್ವಹಣೆ ಮಾಡುವಲ್ಲಿ ಮೂರು ವಿಭಾಗಗಳು ಬರುತ್ತವೆ, ಅಂದರೆ

(ಅ) ಉನ್ನತ ಅಧ್ಧಿಕಾರಿಗಳು/ನಿರ್ವಹಣೆ ಮಂಡಳಿ (Senior Executives & Board of Management).

(ಆ) ನೌಕರರು (Employees/Staff)

(ಇ) ಗ್ರಾಹಕರು (Customers)

ಮೊದಲ ಎರಡು ವಿಭಾಗಗಳನ್ನು ಸೇರಿಸಿ Internal Human Resources (ಆಂತರಿಕ ಮಾನವ ಸಂಪನ್ಮೂಲ) ಅಂತಾ ಕರೆಯುತ್ತಾರೆ. ಎಲ್ಲಾ ಗ್ರಾಹಕರಿಗೆ External Huma Resources (ಬಾಹ್ಯ ಮಾನವ ಸಂಪನ್ಮೂಲ) ಅಂತಾ ಪರಿಗಣಿಸಬಹುದು.

ಆಂತರಿಕ ಮಾನವ ಸಂಪನ್ಮೂಲ ಸಂತಸದಿಂದ ಇದ್ದರೆ, ಅವರೆ ಬಾಹ್ಯ ಮಾನವ ಸಂಪನ್ಮೂಲವನ್ನು ಸಂತೃಪ್ತಿಗೊಳಿಸಲು ಸಾಧ್ಯ. ಇದಾಗಬೇಕಾದರೆ ಕೆಳಗೆ ನಮೂದಿಸಿದ ಅಂಶಗಳಿಗೆ ಮಹತ್ವ ನೀಡಿ ಸಂಸ್ಥೆಗಳನ್ನು ಕಟ್ಟಿ–ನಡೆಸಬೇಕಾಗುತ್ತದೆ.

1. ಸಂಸ್ಥೆಯಲ್ಲಿರುವ ಪ್ರತಿ ವ್ಯಕ್ತಿಯೂ ಶಕ್ತಿಯಾಗಿ ಮಾರ್ಪಾಡಾಗಬೇಕು. ಅದಾಗಲು ಅವನಿಗೆ ತನ್ನ ಗುರಿ (Goal) ಮತ್ತು ಪಾತ್ರ (Roles)ಗಳ ಅರಿವು ಚನ್ನಾಗಿ ಆಗುವಂತೆ ನಿರ್ವಹಣಾ ರೂಪರೇಷೆಗಳ (Management Policy) ನ್ನು ರೂಪಿಸಬೇಕಾದದ್ದು ಸಂಸ್ಥೆಯ ಕರ್ತವ್ಯ.

2. ವ್ಯಕ್ತಿ ತನ್ನಲ್ಲಿಯ ಶಕ್ತಿ ಸಾಮರ್ಥ್ಯಗಳನ್ನು ಸಮರ್ಪಕವಾಗಿ ಹಾಗೂ ಸಂಪೂರ್ಣವಾಗಿ ಬಳಸಿಕೊಳ್ಳಲು ಒಳ್ಳೆಯ ಕೆಲಸದ ವಾತಾವರಣ (Favourable work environment) ಕಲ್ಪಿಸ ಬೇಕಾದದ್ದು ಸಂಸ್ಥೆಯ ಜವಾಬ್ದಾರಿ.

3. ಮೇಲಿನ ವಿಷಯಗಳು ಇದ್ದರೆ, ನೌಕರಿ ವರ್ಗದವರಿಗೆ ಕೆಲಸ ನಿಭಾಯಿಸಲು ಧನಾತ್ಮಕ ಮನೋಭಾವನೆ (Positive attiude) ಮತ್ತು ಉತ್ಸಾಹ (Motivation) ಬರುತ್ತದೆ.

4. ಇಂತಹ ಸಿಬ್ಬಂದಿಗೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಕೌಶಲ್ಯಗಳ (Technical & Administrative Skills) ಬಗ್ಗೆ ವಿಶೇಷ ತರಬೇತಿ ನೀಡಿದರೆ ಆ ಮಾನವ ಸಂಪನ್ಮೂಲ 'ಆಸ್ತಿ' (Asset) ಆಗಿ ಮಾರ್ಪಾಟಾಗುತ್ತದೆ.

5. ಸಂಸ್ಥೆಯ ಎಲ್ಲಾ ಕೆಲಸ–ಕಾರ್ಯಗಳನ್ನು ಏಕಾಂಗಿಯಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಬೇರೆಯವರ ಜೊತೆ ಬೆರೆತು ಅನ್ಯೋನ್ಯ ಸಂಬಂಧಗಳನ್ನು ಬೆಳೆಸಿಕೊಂಡು (Good Interpersonal Relationships) ಮತ್ತು ಉತ್ತಮ ಸಂವಹನ ಕೌಶಲ್ಯ (Communitcation skills) ಗಳಿಂದ ಕಾರ್ಯನಿರ್ವಹಿಸಬೇಕಾಗುತ್ತದೆ.

ಈ ರೀತಿ ಕೆಲಸ ಮಾಡುವಾಗ ನಿರ್ಧಾರ ತೆಗೆದುಕೊಳ್ಳುವ (Decision making skills) ಬೇರೆಯವರಿಂದ ಕೆಲಸ ತೆಗೆದುಕೊಳ್ಳುವ (Delegation skills), ತೊಂದರೆ ನಿಭಾಯಿಸುವ (Problem Solving Skills) ಕಲೆಗಳನ್ನು ಕರಗತ ಗೊಳಿಸಬೇಕಾಗಿತ್ತದೆ.

6. ಸಂಸ್ಥೆಯ ಸಕಲ ಕಾರ್ಯಗಳು ತಂಡಗಳಿಗೆ ಸಮರ್ಪಕವಾಗಿ ವಿಭಜನೆ ಮಾಡಿಕೊಟ್ಟರೆ, ಅಲ್ಪ ಸಮಯದಲ್ಲಿ ಹೆಚ್ಚಿನ ಪರಿಣಾಮಕಾರಿ ಕೆಲಸ ನಿರ್ವಹಿಸಬಹುದು. ಈ ದಿಶೆಯಲ್ಲಿ ಗುಂಪಿನಲ್ಲಿ ಹೊಂದಿಕೊಂಡು ಕೆಲಸ ಮಾಡುವ (Team work) ಮತ್ತು ಗುಂಪಿನ ನಾಯಕತ್ವ (Leadership) ವಹಿಸಿ ಕಾರ್ಯನಿಭಾಯಿಸುವ ಗುಣಗಳು ಮಹತ್ವದ್ದಾಗುತ್ತವೆ.

7. ಎಲ್ಲರೂ ಕೆಲಸ ಮಾಡಿದರೂ, ಕೆಲವು ಮಾತ್ರ ವೇಳೆಗೆ ಸರಿಯಾಗಿ ನಿಭಾಯಿಸುವ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾರೆ. (Time Management Skills). ಇದು ಸರಿಯಾಗಿ ಯೋಚನೆ ಮತ್ತು ಯೋಜನೆ ಮಾಡುವ ಮೂಲಕ ಸಾಧ್ಧಿಸುವ ಕಲೆ, ಎಲ್ಲರೂ ಕಲಿಯಬೇಕಾದ ಮತ್ತು ಅಳವಡಿಸಿಕೊಳ್ಳಬೇಕಾದ ಗುಣ.

8. ಸಂಸ್ಥೆ ಅಂದರೆ ಭಿನ್ನ–ಭೇದಗಳು (Confliets) ಸಹಜ, ಅದೇ ರೀತಿ ಗಂಡಾಂತರ (Crisis) ದ ಪರಿಸ್ಥಿತಿಗಳು ಅನಿವಾರ್ಯ. ಅಂತಹ ಪ್ರಸಂಗಗಳನ್ನು ನಿಭಾಯಿಸುವ ಕಲೆ–ಕೌಶಲ್ಯಗಳು ಮಹತ್ವದ್ದಾಗುತ್ತವೆ.

(ಮುಂದಿನ ಸಂಚಿಕೆಗೆ...)

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

# ಜಮ್ಮು ಕಾಶ್ಮೀರ ನೆರೆಹಾವಳಿ ಸಂತ್ರಸ್ತರಿಗಾಗಿ ಧನ ಸಹಾಯಕ್ಕೆ ಕೋರಿಕೆ



ಜಮ್ಮು ಕಾಶ್ಮೀರದ ನೆರೆಹಾವಳಿಯಿಂದ ಲಕ್ಷಾಂತರ ಜನರು ನಿರಾಶ್ರೀತರಾಗಿದ್ದಾರೆ. ಅನೇಕ ಜನರು ಸಾವಿಗಿಡಾಗಿದ್ದಾರೆ. ಕೋಟ್ಯಂತರ ರೂಪಾಯಿಗಳ ಆಸ್ತಿ ಹಾಗೂ ಮೂಲಭೂತ ಸೌಲಭ್ಯಗಳೂ ಕೂಡ ಹಾನಿಗಿಡಾಗಿವೆ. ನಮ್ಮ ಸಹೋದರ ಸಹೋದರಿಯರ ಜೀವನ ಸಂಕಷ್ಟಕ್ಕೊಳಗಾಗಿದೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಇದನ್ನು ರಾಷ್ಟ್ರೀಯ ವಿಪತ್ತು ಎಂದು ಘೋಶಿಸಿ ಈ ನೈಸರ್ಗಿಕ ಪ್ರಕೋಪವನ್ನು ಎದುರಿಸಲು ದೇಶದಜನತೆಯ ನೆರವನ್ನೂ ಕೋರಿದ್ದಾರೆ.

ಆದ್ದರಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಉದಾರವಾಗಿ ಧನ ಸಹಾಯಮಾಡಲು ಕೋರಿದೆ. ತಾವುಗಳು ಚೆಕ್/ಡಿ.ಡಿ.ಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇಲ್ಲಿಗೆ ಸಂದಾಯವಾಗುವಂತೆ ಕಳುಹಿಸಲು ಕೋರಿದೆ. RTGS/NEFT/ಡಿಡಿ ಚೆಕನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಖಾತೆ ನಂ–103710204000006 IFSC Code-KSCB0000001 ಖಾತೆಗೆ ಕಳುಹಿಸಲು ಕೋರಿದೆ.

# ಮಹಿಳೆ ಸ್ವಾವಲಂಬನೆಗೆ ಅವಕಾಶಗಳ ಸದ್ಬಳಕೆ ಅಗತ್ಯ - ಶ್ರೀಮತಿ ಮಂಜುಳಾ ಮಾನಸ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಗುರುನಾಥ ಜಾಂತಿಕರರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಉಪಾಧ್ಯಕ್ಷರಾಧ ಶ್ರೀ ಹೆಚ್.ವಿ.ರಾಜೀವರವರು ವಹಿಸಿದ್ದರು. ಸ್ವಾಗತವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಮಂಜುಳಾ ಪಾಟೀಲರವರು ನೆರವೇರಿಸಿದರು, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಪ್ರಾಸ್ತಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಶ್ರೀಮತಿ ಮಂಜುಳಾ ಮಾನಸ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು, ಸಹಕಾರ ಕ್ಷೇತ್ರದ ಬೆಳವಣಿಗೆ ರಾಜ್ಯದಲ್ಲಿ ಉತ್ತಮವಾಗಿದ್ದು ಮಹಿಳೆಯರು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಲು ಅವಕಾಶಗಳಿವೆ ಎಂದು ನುಡಿದು, ವ್ಯವಸ್ಥೆಗಳ ನಿರ್ವಹಣಾ ಕಲೆಯನ್ನು ರೂಢಿಸಿಕೊಳ್ಳುವುದು ಇಂದಿನ ಅಗತ್ಯತೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ವಸಂತ ನಾಯಕ ಉಪಸ್ಥಿತರಿದ್ದರು. 2 ದಿನಗಳ ಅವಧಿಯಲ್ಲಿ ಶ್ರೀ ಹೆಚ್.ಎಸ್.ನಾಗರಾಜಯ್ಯ ಸಹಕಾರ ಸಂಘಗಳ ಅಪರ ನಿಬಂಧಕರು ನಿಬಂಧಕರ ಕಚೇರಿ ಇವರು ಸಹಕಾರ –ಸಹಕಾರ ಸಂಸ್ಥೆ ಸಹಕಾರ ತತ್ವ– ಸದಸ್ಯರ, ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು ವಿಷಯದ ಬಗ್ಗೆ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಸಹಕಾರಿ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳ ಮುಖ್ಯಾಶಗಳು ಬಗ್ಗೆ ಶ್ರೀಮತಿ ರೋಹಿಣಿ ಹಂದೆಯವರು ಸ್ಮಾರ್ಟ ಆಂಗಲ್ಸ ಬೆಂಗಳೂರು ಇವರು ಮಹಿಳಾ ಸಬಲೀಕರಣ ವಿಧಾನಗಳು ಸಂಪನ್ಮೂಲಗಳುಸವಾಲುಗಳು ಪರಿಹಾರಗಳು ವಿಷಯದ ಬಗ್ಗೆ ಶ್ರೀಮತಿ ಎಮ್.ಆರ್.ಸುರೇಖಾ ಅಧ್ಯಾಪಕಿ ಕೆಐಸಿಎಮ್ ಬೆಂಗಳೂರು ರವರು ಸಹಕಾರ ಚಳುವಳಿಯ ಸಾಧನೆ ಸವಾಲುಗಳು ಮತ್ತು ಅವಕಾಶಗಳು ಶಿವಮೊಗ್ಗದ ಸನ್ಮತಿ ಫೌಂಡೆಶನ್ನ ಶ್ರೀ ಬಿ.ಎ.ಮಹದೇವಪ್ಪರವರು ಸಹಕಾರಿಯ ಆಂತರಿಕ ಸಂಬಂದಗಳ ನಿರ್ವಹಣೆ–ಗ್ರಾಹಕ ಸೇವೆಗಳ ನಿರ್ವಹಣೆ ಮತ್ತು ಗುಣಮಟ್ಟ ನಿರ್ವಹಣೆಗಳ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಎಮ್. ಮುನಿರೆಡ್ಡಿಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸೌಲಭ್ಯಗಳು ಬಗ್ಗೆ ಉಪನ್ಯಾಸ ಮತ್ತು ಶ್ರೀಮತಿ ಎಸ್.ಕೆ.ನಾಗರತ್ನಾರಾನ ಶ್ರೀ ವೈ.ವಿ ಗುಂಡೂರಾವರವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ನಾಗರತ್ನರವರು ವಂದನಾರ್ಪಣೆ ಸಲ್ಲಿಸಿದರು.

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವಿಭಾಗೀಯ ಕಛೇರಿ #436, ಮೊದಲನೆಯ ಮಹಡಿ, ಹುಯಿಲಗೋಳ ಕಟ್ಟಡ ಶನಿ ಮಂದಿರ ಹತ್ತಿರ, ಪಾಟೀಲ ಗಲ್ಲಿ, ಬೆಳಗಾವಿ–590001 ದೂ.ಸಂ : 0831–2401551.

ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010